ಆರ್ಬಿಟ್ ಸಂಸ್ಥೆ, ಹುಮನಾಬಾದ ಮತ್ತು
ಸೇವಾ ಸಂಗಮ ಸಮಾಜ ಸೇವಾ ಸಂಸ್ಥೆ, ಕಲಬುರಗಿ

# ಸೇವಾವಾಣಿ

ಅಗಸ್ಟ್ 2024








AUGUST 2024

## "ಮಹಿಳಾ ಒಕ್ಕೂಟದ ಪದಾಧಿಕಾರಿಗಳಿಗೆ ಸಾಮರ್ಥ್ಯ ಬಲವರ್ಧನೆ ಕುರಿತು ತರಬೇತಿ"

ಆರ್ಬಿಟ್ ಸಂಸ್ಥೆಯಲ್ಲಿ 16 ಜೂಲೈ 2024 ಮಂಗಳವಾರ ಮಹಿಳಾ ಸಬಲೀಕರಣ ಯೋಜನೆಯ ಸಂಯುಕ್ತಾಶ್ರಯದಲ್ಲಿ ಮಹಿಳಾ ಒಕ್ಕೂಟದ ಪದಾಧಿಕಾರಿಗಳಿಗೆ ಸಾಮರ್ಥ್ಯ ಬಲವರ್ಧನೆ ಕುರಿತು ಒಂದು ದಿವಸದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್ ಮಾತನಾಡಿ ಸಂಘದ ಪ್ರತಿಯೊಬ್ಬ ಮಹಿಳೆಯರ ಮನಸ್ಸು ಹಾಗೂ ಜೀವನ ಶೈಲಿಯನ್ನು ಬದಲಾಯಿಸುವ ನಾಯಕರು ನೀವಾಗಬೇಕು. ತಮ್ಮ ತಮ್ಮ ಕಾರ್ಯಕ್ಷೇತ್ರದ ಒಕ್ಕೂಟಗಳಲ್ಲಿ ಚರ್ಚಿಸಿ ನಿರ್ಣಯವನ್ನು ತೆಗೆದುಕೊಳ್ಳಬೇಕು. ಸಮುದಾಯ ಹಾಗೂ ಸಮಾಜದಲ್ಲಿ ನಡೆಯುವಂತಹ ದೌರ್ಜನ್ಯ, ದಬ್ಬಾಳಿಕೆ ವಿರುದ್ಧ ಸಂಘಟನೆಯ ಮೂಲಕ ಧ್ವನಿ ಎತ್ತಿ ನಿಲ್ಲುವವರಾಗಬೇಕು ಎಂದು ಶುಭ ಹಾರೈಸಿದರು. ಮಹಿಳಾ ಸಬಲೀಕರಣ ಯೋಜನೆಯ ರಾಜ್ಯ ಸಂಯೋಜಕರಾದ ಶ್ರೀಮತಿ ಲಯನ ರವರು ಸಂಘ ಮಹಾಸಂಘ ಒಕ್ಕೂಟದ ಗುರಿ ಉದ್ದೇಶವೇನು ಎಂಬುದರ ಕುರಿತು ಪ್ರತಿನಿಧಿಗಳೊಂದಿಗೆ ಮುಖಾಮುಖಿಯಾಗಿ ಸಂಭಾಷಣೆ ಮತ್ತು ಚಟುವಟಿಕೆಗಳ ಮೂಲಕ ಸವಿಸ್ತಾರವಾಗಿ ತಿಳಿಯಪಡಿಸಿದರು. ಮಹಿಳಾ ಸಬಲೀಕರಣ ಯೋಜನೆಯ ರಾಜ್ಯ ಸಲಹೆಗಾರರಾದ ಸಿಸ್ಟರ್ ನ್ಯಾನ್ಸಿ ರವರು ಮಹಿಳೆಯರು ಮೊಬೈಲ್ ಮತ್ತು ಟಿವಿಯಲ್ಲಿ ಅನವಶ್ಯಕವಾದ ಧಾರವಾಹಿ ಪಿಚ್ಚರ್ಗಳನ್ನು ನೋಡುವುದನ್ನು ಹೊರತುಪಡಿಸಿ ಟಿವಿ ನ್ಯೂಜ್ ಪೇಪರ್ ಓದುವಂತಹ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು. ಹಾಗೂ ಮಾಧ್ಯಮ ಶಿಕ್ಷಣದಲ್ಲಿಯು ಮುಂದುವರೆಯಬೇಕು. ತಾಲೂಕ ಒಕ್ಕೂಟ, ಜಿಲ್ಲಾ ಒಕ್ಕೂಟದ ಮಟ್ಟದಲ್ಲಿ ಬೆಳೆದಿದ್ದಿರಿ ಆದರೆ ರಾಜ್ಯ ಒಕ್ಕೂಟ ರಚನೆಯಾಗಿದ್ದು ಇನ್ನೂ ಬಹಳಷ್ಟು ಆಸಕ್ತಿ ತೊರಿಸಬೇಕು. ಮಹಿಳೆಯರು ಸುಸ್ಥಿರತೆ ಜೀವನವನ್ನು ನಡೆಸುವುದರೊಂದಿಗೆ ಸರ್ವೋತ್ತಮುಖ ಅಭಿವೃದ್ಧಿಯನ್ನು ಹೊಂದಬೇಕು ಎಂದು ತಿಳಿಸಿದರು. ಐದು ಧರ್ಮಕ್ಷೇತ್ರದ 35 ಪ್ರತಿನಿಧಿಗಳು ಹಾಗೂ ಅರ್ಬಿಟ್ ಸಂಸ್ಥೆಯ ಮಹಿಳಾ ಸಬಲೀಕರಣ ಯೋಜನೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರು ಒಟ್ಟು 42 ಫಲಾನುಭವಿಗಳು ಭಾಗವಹಿಸಿದರು.



ಮಹಾ ಪೂಜ್ಯ ರಾಬರ್ಟ್ ಮಿರಾಂದಾ
ಗುಲಬರ್ಗಾ ಧರ್ಮಾಧ್ಯಕ್ಷರು

ವಂ. ಫಾ॥ ವಿಕ್ಟರ್ ವಾಸ್
ನಿರ್ದೇಶಕರು, ಆರ್ಬಿಟ್ ಮತ್ತು
ಸೇವಾ ಸಂಗಮ ಸಂಸ್ಥೆ, ಕಲಬುರಗಿ









orbit humnabad
Orbit Bidar
@orbitbidar330
www.orbitbidar.in
+91 8660968063
+91 8971119914
Orbitbidar93@gmail.com

# “ನವಜೀವನ (ಎ.ಪಿ.ಎಫ್) ಕಾರ್ಯಕ್ರಮ”

## “ಉದ್ಯೋಗ ಖಾತ್ರಿ ಕೂಲಿ ಕಾರ್ಮಿಕರಿಗೆ ಮಾನಸಿಕ ಅಸ್ವಸ್ಥರ ಅರಿವಿನ ಕಾರ್ಯಕ್ರಮ”



ಜುಲೈ 4 ರಂದು ಹುಮ್ನಾಬಾದ್ ತಾಲೂಕಿನ ಕಬೀರಬಾದ್ ವಾಡಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಉದ್ಯೋಗ ಖಾತ್ರಿ ಕೂಲಿ ಕಾರ್ಮಿಕರಿಗೆ ಮಾನಸಿಕ ಅಸ್ವಸ್ಥರ ಅರಿವಿನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ತರಬೇತಿಯಲ್ಲಿ ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀಮತಿ ಪ್ರೀತಿ, ಮಾನಸಿಕ ಕಾಯಿಲೆಯೂ ಒಂದು ಮೆದುಳಿನ ಕಾಯಿಲೆಯಾಗಿದ್ದು, ಇದು ಬಡವರು ಶ್ರೀಮಂತರು ಎನ್ನದೆ ಸರ್ವರಲ್ಲಿಯೂ ಕಂಡು ಬರಬಹುದಾದ ಕಾಯಿಲೆಯಾಗಿದೆ.ಈ ಕಾಯಿಲೆಯ ಲಕ್ಷಣಗಳು ಕಂಡು ಬಂದಾಗ ಕೆಲವರು ದೆವ್ವ, ಪಿಶಾಚಿ, ಮಾಟ ಮಂತ್ರ, ವಂಶ ಪರಂಪರೆಯಿಂದ ಎಂದು ತಪ್ಪಾಗಿ ಭಾವಿಸಿ ಮೂಢನಂಬಿಕೆಗೆ ಒಳಗಾಗುತ್ತಿದ್ದಾರೆ. ಆದರೆ ಮಾನಸಿಕ ಕಾಯಿಲೆಗೆ ಸೂಕ್ತ ಸಮಯದಲ್ಲಿ ಪತ್ತೆ ಹಚ್ಚುವ ಮೂಲಕ ತಜ್ಞ ಮನೋವೈದ್ಯರಿಂದ ಚಿಕಿತ್ಸೆ ಪಡೆದು, ಮಾನಸಿಕ ಕಾಯಿಲೆಯ ಲಕ್ಷಣಗಳನ್ನು ನಿವಾರಣೆ ಮಾಡಿಕೊಳ್ಳಬಹುದಾಗಿದೆ. ಈ ಲಕ್ಷಣಗಳಿಂದ ಯಾರಾದರೂ ಸಮಸ್ಯೆ ಅನುಭವಿಸುತ್ತಿದ್ದಾಗ ಮಾನವೀಯ ದೃಷ್ಟಿಯಿಂದ ಸಹಾಯವನ್ನು ಮಾಡಬೇಕು ಹಾಗೂ ಸಂಸ್ಥೆಯ ಸಹಾಯವಾಣಿಗೆ ಕರೆ ಮಾಡುವ ಮೂಲಕ ಸೂಕ್ತ ಮಾರ್ಗದರ್ಶನ ಪಡೆದುಕೊಳ್ಳಬಹುದು ಎಂದು ಮನವರಿಕೆ ಮಾಡಿಕೊಡಲಾಯಿತು.

## “ಮಹಿಳಾ ಸ್ವಸಹಾಯ ಸಂಘದ ಮಹಿಳೆಯರಿಗೆ ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ”



ಜುಲೈ 25 ರಂದು ಚಿಟಗುಪ್ಪ ತಾಲೂಕಿನ ತಾಳಮಡಗಿ ಗ್ರಾಮದ ಮಹಿಳಾ ಸ್ವಸಹಾಯ ಸಂಘದ ಮಹಿಳೆಯರಿಗೆ ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಮತ್ತು ಅಜೀಮ್ ಪ್ರೇಮ್ ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.ಜಾಗ್ರತಿ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ನವಜೀವನ ಕಾರ್ಯಕ್ರಮದ ಶ್ರೀ ಅರುಣ್ ಅವರು ಮಹಿಳೆಯರನ್ನು ಉದ್ದೇಶಿಸಿ ಮಾತನಾಡಿ, ಮಾನಸಿಕ ಆರೋಗ್ಯ ಮತ್ತು ಮಾನಸಿಕ ಕಾಯಿಲೆ, ಅದರ ಲಕ್ಷಣಗಳ ಕುರಿತು ಮಾಹಿತಿ ನೀಡಿದರು. ಮಾನಸಿಕ ಕಾಯಿಲೆ ಬಂದರೆ ಭಯಪಡುವ ಅವಶ್ಯಕತೆ ಇಲ್ಲ ಇತರ ಕಾಯಿಲೆಗಳಂತೆ ಇದು ಕೂಡ ಒಂದು ಮೆದುಳಿನ ಕಾಯಿಲೆಯಾಗಿದೆ, ಇದಕ್ಕೆ ಸೂಕ್ತ ಚಿಕಿತ್ಸೆ ಕೊಡಿಸುವುದರ ಮೂಲಕ ಗುಣಪಡಿಸಬಹುದು ಎಂದು ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ ಆರ್ಬಿಟ್ ಸಂಸ್ಥೆ ಸಿಬ್ಬಂದಿ ವರ್ಗದವರು ಮತ್ತು ಸ್ವ ಸಹಾಯ ಸಂಘದ ಸದಸ್ಯರು ಸೇರಿ ಒಟ್ಟು 20 ಜನರು ಭಾಗವಹಿಸಿದರು ತರಬೇತಿಯ ಮಾಹಿತಿ ಪಡೆದುಕೊಂಡರು.

## “ಸೂಕ್ತ ಸಲಹೆ ಮಾರ್ಗದರ್ಶನ ನೀಡಿದ ಆರ್ಬಿಟ್ ಸಂಸ್ಥೆ”



ಜುಲೈ 22 ರಂದು ಹುಮ್ನಾಬಾದ್ ತಾಲೂಕಿನ ಹಳ್ಳಿಖೇಡವಾಡಿ ಗ್ರಾಮದ ಹಣಮಂತ ತಂದೆ ಪ್ರಕಾಶ ವಯಸ್ಸು 32, ಹೆಂಡತಿಯ ಹೆಸರು ಇಂದಮ್ಮ. ಹಣಮಂತ ಇವರು ಮಾನಸಿಕ ಕಾಯಿಲೆಗೆ ಕಾರಣರಾಗಲು ತಂದೆ ಆಕ್ಸಿಡೆಂಟ್‌ನಲ್ಲಿ ತೀರಿ ಹೋಗಿರುವುದು. ಅದನ್ನು ಕಂಡು ಒತ್ತಡಕ್ಕೆ ಒಳಗಾಗಿ ಮಾನಸಿಕ ಕಾಯಿಲೆಗೆ ಒಳಗಾಗಿದ್ದಾರೆ. ಇವರು ಒಂದು ವರ್ಷದಿಂದ ಹೈದ್ರಾಬಾದ್‌ನಲ್ಲಿ ಮಾತ್ರೆಗಳು ಪಡೆದುಕೊಳ್ಳುತ್ತಿದ್ದರು. ಒಂದು ದಿವಸ ಆರ್ಬಿಟ್ ಸಂಸ್ಥೆಯಿಂದ ಕಾರ್ಯಕರ್ತರು ಇವರ ಮನೆಗೆ ಭೇಟಿ ನೀಡಿ, ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತವಾಗಿ ಚಿಕಿತ್ಸೆ ಹಾಗೂ ಮಾತ್ರೆಗಳು ಸಿಗುತ್ತವೆ ಎಂದು ಮಾಹಿತಿ ನೀಡಿದರು. ಈಗ ನಾನು ಹೈದ್ರಾಬಾದ್ ಆಸ್ಪತ್ರೆಗೆ ಹೋಗದೆ ಹುಮ್ನಾಬಾದ್ ತಾಲೂಕಿನ ಸರ್ಕಾರಿ ಆಸ್ಪತ್ರೆಯಲ್ಲಿ ಒಂದುವರೆ ವರ್ಷದಿಂದ ಔಷಧಿಯನ್ನು ಪಡೆದುಕೊಳ್ಳುತ್ತಿದ್ದೇನೆ. ಈಗ ನಾನು ಸ್ವಲ್ಪ ಗುಣಮುಖವಾಗಿ ಕೆಲಸಕ್ಕೆ ಹೋಗುತ್ತಿದ್ದೇನೆ ದಿನಕ್ಕೆ 300 ಕೂಲಿ ಪಡೆದುಕೊಳ್ಳುತ್ತಿದ್ದೇನೆ. ಒಂದುವರೆ ವರ್ಷದಿಂದ ಸರ್ಕಾರಿ ಆಸ್ಪತ್ರೆಯಿಂದ ಔಷಧಿ ಪಡೆದುಕೊಂಡು ಈಗ ಬಹುಮಟ್ಟಿಗೆ ಗುಣಮುಖ ನಾಗಿದ್ದೇನೆ, ಈಗ ಹೊರಗಡೆ ಹೋಗಿ ಸ್ವಲ್ಪ ಸ್ವಲ್ಪ ಕೆಲಸ ಮಾಡ್ತಾ ಇದ್ದೇನೆ, ವೈದ್ಯರ ಸಲಹೆ ಮೇರೆಗೆ ಮಾತ್ರೆಗಳನ್ನು ಕದಿಮೆ ಮಾಡಲು ತಿಳಿಸಿದ್ದಾರೆ. ನಮಗೆ ಸೂಕ್ತ ಸಲಹೆ ಮಾರ್ಗದರ್ಶನ ನೀಡಿದ ಆರ್ಬಿಟ್ ಸಂಸ್ಥೆಗೆ ಕುಟುಂಬದ ಪರವಾಗಿ ತುಂಬು ಹೃದಯದ ಧನ್ಯವಾದಗಳು ಸಲ್ಲಿಸುತ್ತೇನೆ ಎಂದು ತಿಳಿಸಿದ್ದಾರೆ.

## “ವಿಶೇಷ ವಿಕಲಚೇತನರ ಸಂಘದ ಸಭೆ”



ಜುಲೈ 15 ರಂದು ಹುಮ್ನಾಬಾದ್ ನಗರದ ಜೇರ್ಪೆಟ್ ಕಾಲೋನಿಯಲ್ಲಿ ಬಸವಣ್ಣ ವಿಶೇಷ ವಿಕಲಚೇತನರ ಸಂಘದ ಸಭೆ ಮಾಡಲಾಯಿತು. ಈ ಸಭೆಯು ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಹಾಗೂ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಸಯುಕ್ತ ಆಶ್ರಯದಲ್ಲಿ ನಡೆಸಲಾಯಿತು. ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ನೀಲಕಂಠ ಅವರು ಸಂಘದ ಸದಸ್ಯರಿಗೆ ಸರ್ಕಾರದಿಂದ ಸಿಗುವ ಸೌಲಭ್ಯದ ಕುರಿತು ಮತ್ತು ಯು.ಡಿ.ಐ.ಡಿ ಕಾರ್ಡ್ ಗಳ ಬಗ್ಗೆ ಮಾಹಿತಿ ನೀಡಿದರು. ಸರ್ಕಾರದ ಏನೇ ಸೌಲಭ್ಯಗಳು ಪಡೆಯಬೇಕಾದರೆ ನಾವು ಸಂಘದ ಮೂಲಕ ಒಗ್ಗಟ್ಟಾಗಿ ಮನವಿ ಸಲ್ಲಿಸುವ ಮೂಲಕ ಸರಕಾರದ ಸವಲತ್ತುಗಳನ್ನು ಸುಲಭವಾಗಿ ಪಡೆಯಬಹುದು ಎಂದು ಸಭೆಯಲ್ಲಿ ಉತ್ತಮ ಅಭಿಪ್ರಾಯ ವ್ಯಕ್ತಪಡಿಸಿದರು.



ಜುಲೈ16 ರಂದು ಹುಮನಾಬಾದ ತಾಲೂಕಿನ ಗಡವಂತಿ ಗ್ರಾಮದಲ್ಲಿ ಬೆಳಿಗ್ಗೆ 11:30 ಗಂಟೆಗೆ ಮಾಣಿಕ್ ಪ್ರಭು ವಿಕಲಚೇತನರ ಸಂಘದ ಸಭೆ ಮಾಡಲಾಯಿತು. ಸಂಘದಲ್ಲಿ ಚರ್ಚೆ ಮಾಡಿದ ವಿಷಯಗಳು, ಸರಿಯಾದ ಸಮಯಕ್ಕೆ ಸಭೆಗೆ ಸೇರಬೇಕು, ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ಹಂಚಿಕೊಳ್ಳಬಹುದು, ಸರಕಾರದ ಸವಲತ್ತುಗಳ ಪಡೆಯುವ ನಿಟ್ಟಿನಲ್ಲಿ ಚರ್ಚಿಸಬೇಕು, ಸರ್ಕಾರಿ ಸೌಲಭ್ಯ ಬಗ್ಗೆ ಯುಡಿಐಡಿ ಕಾರ್ಡ್ ಬಗ್ಗೆ ಮತ್ತು ಪೆನ್ಷನ್ ಬಗ್ಗೆ, ಗ್ರಾಮ ಪಂಚಾಯಿತಿ ಭೇಟಿ ಮಾಡುವುದು, ಗ್ರಾಮ ಸಭೆಗಳಲ್ಲಿ ಭಾಗವಹಿಸುವುದರೊಂದಿಗೆ ವಿಕಲಚೇತನರಿಗೆ ಪಂಚಾಯತಿಯಲ್ಲಿ ಲಭ್ಯವಿರುವ ಐದು ಪ್ರತಿಶತ ಬಜೆಟ್ ಪಡೆಯುವ ಕುರಿತು ಪಿಡಿಓ ಸರ್ ಅವರಿಗೆ ಭೇಟಿ ಮಾಡಿ ತಿಳಿದುಕೊಳ್ಳಬೇಕು ಎಂದು ಮಾಹಿತಿ ನೀಡಲಾಯಿತು. ಜೊತೆಗೆ ಪರಿಸರದ ಕುರಿತು ಮಾಹಿತಿ ನೀಡಿ ಪ್ರತಿಯೊಬ್ಬರು ತಮ್ಮ ಮನೆಯ ಅಕ್ಕಪಕ್ಕದಲ್ಲಿ ಒಂದೊಂದು ಸಸಿಯನ್ನು ನೆಡುವ ಮೂಲಕ ಪರಿಸರದ ಕುರಿತು ಕಾಳಜಿ ತೋರಿಸುವಂತೆ ಮನವಿ ಮಾಡಲಾಯಿತು.

## “ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ”



ಜುಲೈ 24ರಂದು ಹುಮನಾಬಾದ್ ತಾಲೂಕಿನ ಮುಗನೂರ್ ಗ್ರಾಮದ ಓಣಿಯ ಮಹಿಳೆಯರಿಗೆ ಆರ್ಬಿಟ್ ಸಂಸ್ಥೆ ಹುಮನಾಬಾದ್ ಹಾಗೂ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ನವಜೀವನ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಪೂಜಾ ಅವರು ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು. ಮಾನಸಿಕ ಆರೋಗ್ಯ, ಮಾನಸಿಕ ಕಾಯಿಲೆ, ಅದರ ಲಕ್ಷಣಗಳ ಕುರಿತು ಮಾಹಿತಿ ನೀಡಿದರು, ಮಾನಸಿಕ ಕಾಯಿಲೆ ಬಂದರೆ ಭಯಪಡುವ ಅವಶ್ಯಕತೆ ಇಲ್ಲ, ಇತರ ಕಾಯಿಲೆಗಳಂತೆ ಇದಕ್ಕೂ ಕೂಡ ಸೂಕ್ತವಾದ ಚಿಕಿತ್ಸೆ ಲಭ್ಯವಿದ್ದು, ಸೂಕ್ತ ಚಿಕಿತ್ಸೆ ಕೊಡಿಸುವುದರ ಮೂಲಕ ಕಾಯಿಲೆ ಗುಣಪಡಿಸಬಹುದು ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 13 ಜನ ಓಣಿಯ ಮಹಿಳೆಯರು ಕಾರ್ಯಕ್ರಮದ ಸದುಪಯೋಗವನ್ನು ಪಡೆದುಕೊಂಡರು.



ಮಾನಸಿಕ ಕಾಯಿಲೆಯು ಒಂದು ಮೆದುಳಿನ ಕಾಯಿಲೆಯಾಗಿದ್ದು ಇದಕ್ಕೆ ಸೂಕ್ತ ಚಿಕಿತ್ಸೆ ಲಭ್ಯವಿದೆ.ಪ್ರಾರಂಭಿಕ ಹಂತದಲ್ಲಿ ಮಾನಸಿಕ ಸಮಸ್ಯೆಯನ್ನು ಪತ್ತೆ ಹಚ್ಚುವ ಮೂಲಕ ಸಂಪೂರ್ಣವಾಗಿ ಗುಣಪಡಿಸಬಹುದು ಎಂದು ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀ ಲೋಕೇಶ್ ಅವರು ಮಾಹಿತಿ ನೀಡಿದರು. ಜುಲೈ 19 ರಂದು ಹುಮ್ನಾಬಾದ್ ತಾಲೂಕಿನ ನೆಹರು ನಗರ್ ಗ್ರಾಮದಲ್ಲಿ ಸಾರ್ವಜನಿಕರಿಗೆ ಮಾನಸಿಕ ಅಸ್ವಸ್ಥತೆಯ ಕುರಿತು ಅರಿವಿನ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 31 ಜನ ಭಾಗವಹಿಸಿ ಮಾನಸಿಕ ಆರೋಗ್ಯದ ಕುರಿತು ಮಾಹಿತಿ ಪಡೆದುಕೊಂಡರು.

# “ಮಹಿಳಾ ಸಬಲೀಕರಣ ಕಾರ್ಯಕ್ರಮ”

## “ದಿವ್ಯಜ್ಯೋತಿ ಪ್ರೌಢಶಾಲೆಯಲ್ಲಿ ವನಮೋತ್ಸವ ಕಾರ್ಯಕ್ರಮ”





ದಿನಾಂಕ 26 ರಂದು ಭಾಲ್ಕಿ ತಾಲೂಕಿನ ದಿವ್ಯಜ್ಯೋತಿ ಪ್ರೌಢಶಾಲೆಯಲ್ಲಿ ವನಮೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾದ ಬ್ರದರ್ ರೇಜಿ ರೆನಾಲ್ಡ್ ಮತ್ತು ದಿವ್ಯ ಜ್ಯೋತಿ ಶಾಲೆಯ ವಾರ್ಡನ್ ಸುಧೀರ್ ಅವರು ಭಾಗವಹಿಸಿದ್ದರು. ಬ್ರದರ್ ರೆಜಿ ಅವರು ವನ ಮಹೋತ್ಸವ ಮಾಡುವ ಉದ್ದೇಶದ ಕುರಿತು ವಿವರಿಸಿದರು. ಪ್ರತಿಯೊಬ್ಬರೂ ಒಂದೊಂದು ಸಸಿಗಳನ್ನು ನೆಡುವ ಮೂಲಕ ನಮ್ಮ ಸುತ್ತಮುತ್ತಲಿನ ವಾತಾವರಣವು ಉತ್ತಮವಾಗಿ ರೂಪಿಸಿಕೊಳ್ಳಬಹುದು. ಮರಗಳು ನಮಗೆ ಉತ್ತಮವಾದ ಗಾಳಿಯನ್ನು ಕೊಡುತ್ತವೆ ಮತ್ತು ಇಂಗಾಲದ ಡೈಆಕ್ಸೈಡ್ ಹೀರಿಕೊಳ್ಳುತ್ತದೆ ಮುಂದಿನ ಪೀಳಿಗೆಗೆ ಹವಾಮಾನವೂ ಬೇಕಾದಷ್ಟು ಸಹಾಯ ಮಾಡುತ್ತದೆ. ಪ್ರತಿಯೊಬ್ಬರೂ ಒಂದೊಂದು ಗಿಡಗಳನ್ನು ಹಚ್ಚಬೇಕೆಂದು ತಿಳಿಸಿ ಅಲ್ಲಿ ಗಿಡ ನೆಡುವುದು ಮುಖಾಂತರವನ ಮಹೋತ್ಸವ ಕಾರ್ಯಕ್ರಮವನ್ನು ಆಚರಿಸಲಾಯಿತು.25 ಮಕ್ಕಳು ನಾವು ಗಿಡವನ್ನು ನಡುತ್ತೇವೆಂದು ಪ್ರಮಾಣ ಮಾಡುವ ಮೂಲಕ ಪರಿಸರದ ಜಾಗೃತಿ ಕುರಿತು ಕಳಕಳಿ ಪ್ರದರ್ಶಿಸಿದರು.15 ಮಕ್ಕಳು ನಾವು ಗಿಡಕ್ಕೆ ನೀರನ್ನು ಹಾಕಿ ಸುರಕ್ಷಿತವಾಗಿ ಬೆಳೆಸುತ್ತೇವೆಂದು ಒಪ್ಪಿಕೊಂಡಿದ್ದರು.ಐದು ಮಕ್ಕಳು ನಮ್ಮ ಮನೆಯಲ್ಲಿ ಕೂಡ ಗಿಡಗಳನ್ನು ಹಚ್ಚುತ್ತೇವೆಂದು ಮನವರಿಕೆ ಮಾಡಿಕೊಂಡರು. ಈ ಕಾರ್ಯಕ್ರಮದಲ್ಲಿ 35 ಶಾಲಾ ಮಕ್ಕಳು ಮತ್ತು ಮಹಿಳಾ ಸಬಲೀಕರಣ ಕಾರ್ಯಕ್ರಮದ ಕಾರ್ಯಕರ್ತೆಯರು ಉಪಸ್ಥಿತರಿದ್ದರು

## “ವಿಶ್ವ ಪರಿಸರ ಸಂರಕ್ಷಣಾ ದಿನಾಚರಣೆ ಅಂಗವಾಗಿಸಂಘಗಳ ಮಹಿಳೆಯರಿಗೆ ವನಮಹೋತ್ಸವ ಕಾರ್ಯಕ್ರಮ”



29 ಜುಲೈ ರಂದು ಬೋರಗಿ ಜೆ ಗ್ರಾಮದಲ್ಲಿ ವಿಶ್ವ ಪರಿಸರ ಸಂರಕ್ಷಣಾ ದಿನಾಚರಣೆ ಅಂಗವಾಗಿ ಆರ್ಬಿಟ್ ಸಂಸ್ಥೆಯ ಆಶ್ರಯದಲ್ಲಿ ಬರುವ ಐದು ಮಹಿಳಾ ಸ್ವಾ–ಸಹಾಯ ಸಂಘಗಳ ಮಹಿಳೆಯರಿಗೆ ವನಮಹೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.ಕಾರ್ಯಕ್ರಮವು ದೀಪಾಲಯ್ಯ ಸಮಾಜ ಸೇವಾ ಸಂಸ್ಥೆಯ ನಿರ್ದೇಶಕರಾದ ಸಿಸ್ಟರ್ ಲಿನೆಟ್, ಗ್ರಾಮ ಪಂಚಾಯತ ಸದಸ್ಯರಾದ ಶ್ರೀ ಐಬಖಾನ್ ಹಾಗೂ ಆರ್ಬಿಟ್ ಸಂಸ್ಥೆಯ ಕೌಶಲ್ಯ ತರಬೇತಿ ಕಾರ್ಯಕ್ರಮದ ಸಂಯೋಜಕರಾದ ಶ್ರೀ ಸುಭಾಷ ಮಾನಕರೆ ಅವರು ಉದ್ಘಾಟಿಸಿದರು. ಸಿಸ್ಟರ್ ಲಿನೆಟ್ ಮಾತನಾಡಿ ಸ್ವಾ–ಸಹಾಯ ಸಂಘಗಳ ಉದ್ದೇಶ ಕೇವಲ ಹಣದ ವ್ಯವಹಾರ ಮಾಡುವುದು ಮಾತ್ರವಲ್ಲ, ಸಮಾಜದಲ್ಲಿರುವ ಅನ್ಯಾಯಗಳ ವಿರುದ್ಧ ಧ್ವನಿತ್ತಬೇಕು ಹಾಗೂ ಎಲ್ಲಾ ಕ್ಷೇತ್ರದಲ್ಲಿಯೂ ಮಹಿಳೆಯರು ಮುಂದೆ ಬರಬೇಕು ಎಂದು ಹೇಳಿದರು.ತರುವಾಯ ಗ್ರಾಮ ಪಂಚಾಯತ ಸದಸ್ಯರಾದ ಶ್ರೀ ಐಬಖಾನ್ ರವರು ಪರಿಸರ ಸಂರಕ್ಷಣೆ ಮಾಡುವುದು ಕೇವಲ ಸರಕಾರದ ಕೆಲಸವಲ್ಲ, ನಾವೆಲ್ಲರೂ ಪರಿಸರ ಸಂರಕ್ಷಣೆ ಮಾಡುವುದರಲ್ಲಿ ಕೈಜೋಡಿಸಬೇಕು ಎಂದು ಸಲಹೆ ನೀಡಿದರು.ಕೊನೆಯದಾಗಿ ಸಂಘದ ಮಹಿಳೆಯರಿಗೆ ಸಸಿಗಳು ನೀಡುವುದರ ಮೂಲಕ ಕಾರ್ಯಕ್ರಮವನ್ನು ಕೊನೆಗೊಳಿಸಲಾಯಿತು.

## “ಡೆಂಗು ಕಾಯಿಲೆಯ ಬಗ್ಗೆ ತರಬೇತಿ”



ಜುಲೈ 12ರಂದು ಆರ್ಬಿಟ್ ಸಂಸ್ಥೆ ವತಿಯಿಂದ ಚಿಟ್ಟ ಗ್ರಾಮದಲ್ಲಿ ಡೆಂಗು ಕಾಯಿಲೆಯ ಬಗ್ಗೆ ತರಬೇತಿ ನೀಡಲಾಯಿತು.ನಮ್ಮ ಮನೆ ಸುತ್ತಲಿನ ಸ್ಥಳಗಳನ್ನು ಸಂಪೂರ್ಣವಾಗಿ ಸ್ವಚ್ಛತೆಯಿಂದ ಇಡಲು ಹಾಗೂ ಬಿಸಿ ನೀರನ್ನು ಅಥವಾ ಫಿಲ್ಟರ್ ನೀರನ್ನು ಕುಡಿಯುವಂತೆ, ಸೊಳ್ಳೆ ಬತ್ತಿ ಹಾಗೂ ಸುಳ್ಳೇ ಪರದೆಗಳನ್ನು ಬಳಸುವಂತೆ ತಿಳಿಸಲಾಯಿತು.ಮಕ್ಕಳನ್ನು ಹಾಗೂ ಹಿರಿಯರನ್ನು ತುಂಬಾ ಜಾಗೃತೆಯಿಂದ ನೋಡಿಕೊಳ್ಳುವಂತೆ ಮಾಹಿತಿ ನೀಡಲಾಯಿತು.

## "ಮಹಿಳಾ ಹಕ್ಕುಗಳ ಕುರಿತು ತರಬೇತಿ"



ಜುಲೈ 22ರಂದು ಚಿಟಗುಪ್ಪ ತಾಲೂಕಿನ ಉಡಬಾಳ ಗ್ರಾಮದಲ್ಲಿ ತಾವರೆ ಮಹಾಸಂಗದ ಸದಸ್ಯರಿಗೆ ಶ್ರೀಮತಿ ರೀಟ ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತೆ, ಮಹಿಳಾ ಹಕ್ಕುಗಳ ಕುರಿತು ತರಬೇತಿಯನ್ನು ಹಮ್ಮಿಕೊಂಡಿದ್ದರು. ಮಹಿಳೆಯರಿಗೆ ಇರುವ ವಿಶೇಷ ಹಕ್ಕುಗಳ ಕುರಿತು ತರಬೇತಿಯನ್ನು ನೀಡಿದರು.ಸಮಾನತೆಯ ಹಕ್ಕು, ಸ್ವಾತಂತ್ರ್ಯ ಹಕ್ಕು, ಭಾಗವಹಿಸುವ ಹಕ್ಕು, ಶೋಷಣೆಯ ವಿರುದ್ಧದ ಹಕ್ಕು ಮತ್ತು ಸಂವಿಧಾನಾತ್ಮಕ ಪರಿಹಾರದ ಹಕ್ಕು ಇವುಗಳ ಕುರಿತು ಸವಿಸ್ತಾರವಾದ ಮಾಹಿತಿಯನ್ನು ನೀಡಿದರು, ನಿಮ್ಮ ಹಕ್ಕುಗಳು ಉಲ್ಲಂಘನೆಯಲ್ಲಿ ಧ್ವನಿಯೆತ್ತಿ ನಿಲ್ಲುವಂತಹ ಧೀರ ಮಹಿಳೆಯರು ನಿವಾಗಬೇಕೆಂದು ಮಹಿಳೆಯರಲ್ಲಿ ಉತ್ಸಾಹ ತುಂಬಿದರು.ತರಬೇತಿಯಲ್ಲಿ 25 ಮಹಿಳೆಯರು ಭಾಗವಹಿಸಿ ಅವರಿಗಿರುವ ವಿಶೇಷ ಹಕ್ಕುಗಳ ಬಗ್ಗೆ ತಿಳಿದುಕೊಂಡರು.



## "ಸ್ವ ಉದ್ದಿಮೆಯನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ತರಕಾರಿ ವ್ಯಾಪಾರ ಮಾಡುವ ಮಹಿಳೆ"



ಹೆಸರು ಸಾವಿತ್ರ ಗಂಡ ಹನುಮಂತ ಇವರು ಹುಡುಗಿ ಗ್ರಾಮದ ನಿವಾಸಿಯಾಗಿದ್ದು, ಆರ್ಬಿಟ್ ಸಂಸ್ಥೆಯ ಸಂಯುಕ್ತಶ್ರಯದಲ್ಲಿ ಸುಮಾರ್ 25 ವರ್ಷಗಳಿಂದ ಶಿಲ್ಪ ಸಂಘದ ಅಧ್ಯಕ್ಷರಾಗಿ ಹಾಗೂ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದು. ಮಹಿಳಾ ಸಬಲಿಕರಣ ಯೋಜನೆಯ ಕಾರ್ಯಕರ್ತರಾದ ಶ್ರೀಮತಿ ಸವಿತಾ ಅವರು ನೀಡುವ ಹಲವಾರು ತರಬೇತಿಯ ಸದ್ದುಪಯೋಗವನ್ನು ಪಡೆದುಕೊಂಡಿರುತ್ತಾರೆ. ಸ್ವ ಉದ್ಯೋಗ ,ನಾಯಕತ್ವ, ಪಂಚಾಯಿತ್ ರಾಜ್, ಲಿಂಗ ಸಮಾನತೆ, ಮಹಿಳಾ ಹಕ್ಕುಗಳು, ಇತ್ಯಾದಿ ತರಬೇತಿಗಳನ್ನು ಪಡೆಯುವ ಮೂಲಕ, ಸ್ವ ಉದ್ದಿಮೆಯನ್ನು ಇವರ ಜೀವನದಲ್ಲಿ ಅಳವಡಿಸಿ ಕೊಂಡು ತರಕಾರಿ ವ್ಯಾಪಾರವನ್ನು ಮಾಡುವುದರೊಂದಿಗೆ ಅವರ ಕುಟುಂಬ ಜೀವನವನ್ನು ಉತ್ತಮವಾಗಿ ನಡೆಸುತ್ತಿದ್ದಾರೆ. ಆರ್ಥಿಕವಾಗಿ ಸಬಲರಾಗಲು ಜ್ಞಾನದ ಅರಿವನ್ನು ಮೂಡಿಸಿ ನನ್ನ ಜೀವನವನ್ನು ಸುಧಾರಣೆ ಮಾಡಿದ ಆರ್ಬಿಟ್ ಸಂಸ್ಥೆಗೆ ಧನ್ಯವಾದಗಳು ತಿಳಿಸಿರುತ್ತಾರೆ.

## "ಸಂವಿಧಾನಿಕ ಹಕ್ಕುಗಳ ಕುರಿತು ತರಬೇತಿ"

ಜೂನ್ 8ರಂದು ಮುರಾಲ್ ಗ್ರಾಮದಲ್ಲಿ ಶ್ರೀಮತಿ ಪ್ರಭಾವತಿ ಆರ್ಬಿಟ್ ಸಂಸ್ಥೆಯ ಮಹಿಳಾ ಸಬಲೀಕರಣ ಯೋಜನೆ ಕಾರ್ಯಕರ್ತರು, ಕಿರಣ್ ಜ್ಯೋತಿ ಉಪ ಮಹಾಸಂಗದ ಸದಸ್ಯರಿಗೆ ಸಂವಿಧಾನಿಕ ಹಕ್ಕುಗಳ ಕುರಿತು ತರಬೇತಿಯನ್ನು ಹಮ್ಮಿಕೊಂಡಿದ್ದರು. ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಸಿಸ್ಟರ್ ಶೀಲಾರವರು, ಭಾರತ ಸಂವಿಧಾನವು ವಿಶ್ವದಲ್ಲಿಯೇ ಅತಿ ಬೃಹತ್ ಸಂವಿಧಾನ ವಾಗಿದ್ದು.ಎಲ್ಲ ಜನಸಾಮಾನ್ಯರಿಗೆ ಸಮಾನವಾದ ಹಕ್ಕನ್ನು ಮತದಾನ ಮಾಡುವುದರ ಮೂಲಕ ಒದಗಿಸಿಕೊಟ್ಟಿದೆ ಎಂಬುದರ ಕುರಿತು ಸಂಕ್ಷಿಪ್ತವಾಗಿ ತಿಳಿಸಿದರು ಈ ತರಬೇತಿಯಲ್ಲಿ ಕಿರಣ್ ಜ್ಯೋತಿ ಉಪ ಮಹಾಸಂಗದ ಮತ್ತು ಸಂಘದ 22 ಜನ ಪದಾಧಿಕಾರಿಗಳು ಭಾಗವಹಿಸಿ ಮಹಿಳೆಯರಿಗೆ ಇರುವ ವಿಶೇಷ ಹಕ್ಕಿನ ಬಗ್ಗೆ ತಿಳಿದುಕೊಂಡರು.






## “ಸಮುದಾಯದ ಹಾಗೂ ಕುಟುಂಬದ ಸಮಸ್ಯೆಗಳು ಬಗೆಹರಿಸಿಕೊಳ್ಳುವ ನಾಯಕತ್ವ ಗುಣಗಳ ಬಗ್ಗೆ ತರಬೇತಿ”



ಜುಲೈ 8.ರಂದು ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತರಾಧ ಶ್ರೀಮತಿ ಸವಿತಾ ಹುಡುಗಿ ಗ್ರಾಮದಲ್ಲಿ ಪ್ರೇಮಾಂಜಲಿ ಮಹಾಸಂಗದ ಸಭೆಯನ್ನು ಏರ್ಪಡಿಸಿದರು. ಮಹಾಸಂಗ ಮಾಡುವ ಮುಖ್ಯ ಉದ್ದೇಶ ಸಂಘಟನೆ, ಒಗ್ಗಟ್ಟು ಮತ್ತು ನಾಯಕರಾಗಿ ಬೆಳೆಯುವುದು, ಸಮುದಾಯದ ಹಾಗೂ ಕುಟುಂಬದಲ್ಲಿನ ಸಮಸ್ಯೆಗಳು ಬಗೆಹರಿಸಿಕೊಳ್ಳುವುದರಲ್ಲಿ ಈ ಸಭೆಯು ಸಹಾಯಕವಾಗುತ್ತದೆ.ಮೂಲಭೂತ ಸೌಕರ್ಯಕ್ಕಾಗಿ ಇತರ ಇಲಾಖೆಗಳಿಗೆ ಅರ್ಜಿ ಸಲ್ಲಿಸಲು ನೆರವಾಗುತ್ತದೆ.ಸಂಘ ಮತ್ತು ಮಹಾಸಂಗದ ಸಭೆಗಳು ನಡೆಸಲು ಮಹಾ ಸಂಘದ ಮೂಲಕ ಸಮುದಾಯ ಭವನಕ್ಕಾಗಿ ಅರ್ಜಿ ಕೊಡಲು ತಾವೆಲ್ಲರೂ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕೆಂದು ತಿಳಿಸಲಾಯಿತು. ಈ ಸಭೆಯಲ್ಲಿ 5 ಸಂಘದ ಪದಾಧಿಕಾರಿಗಳು ಭಾಗವಹಿಸಿ ಮಹಾಸಂಗದ ಮೂಲಕ ಅನೇಕ ಸೌಲಭ್ಯಗಳು ಪಡೆದುಕೊಳ್ಳಬಹುದು, ನಾವೆಲ್ಲರೂ ನಾಯಕತ್ವ ಗುಣಗಳನ್ನು ಬೆಳೆಸಿಕೊಂಡು ಸಮಾಜದ ಮುಖ್ಯ ವಾಹಿನಿಗೆ ಬರಬೇಕಾಗುತ್ತದೆ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

## “ಉಚಿತ ಕ್ಯಾನ್ಸರ್ ಹಾಗೂ ನೇತ್ರ ತಪಾಸಣೆ ಶಿಬಿರ"




ಚಿಟ್ಟಗುಪ್ಪ ತಾಲೂಕಿನ ಕಂದುಗೊಳ ಗ್ರಾಮದಲ್ಲಿ ಜುಲೈ 20 ರಂದು, ಸಮಯ 11 ಗಂಟೆಗೆ ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಮಹಿಳಾ ಸಬಲೀಕರಣ ಯೋಜನೆ ಹಾಗೂ ನವ ಜೀವನ ಕಾರ್ಯಕ್ರಮ, ಇಂಡಿಯನ್ ಕ್ಯಾನ್ಸರ್ ಸೊಸೈಟಿ ಗುಲ್ಬರ್ಗ, ವೆಲ್ಮಗ್ನ ನ ಆಸ್ಪತ್ರೆ ಬೀದರ್ ಇವರ ಸಂಯುಕ್ತ ಆಶ್ರಯದಲ್ಲಿ ಉಚಿತ ಕ್ಯಾನ್ಸರ್ ಹಾಗೂ ನೇತ್ರ ತಪಾಸಣೆ ಶಿಬಿರವನ್ನು ಹಮ್ಮಿಕೊಳ್ಳಲಾಯಿತು. ಸಂತ ಲಾರೆನ್ಸ್ ದೇವಾಲಯ ಗಾಂಧಿನಗರ ನಿರ್ದೇಶಕರಾದ ಫಾದರ್ ಜಾರ್ಜ್ ರವರು ಮಾತನಾಡಿ, ನಾವೆಲ್ಲರೂ ಆರೋಗ್ಯವಂತರಾಗಿರಲು ಬಯಸುತ್ತೇವೆ ಆದರೆ ನಾವು ತಿನ್ನುವಂತಹ ಆಹಾರ ಹಾಗೂ ಪಾನಿಯಗಳು ನಮ್ಮ ನಾಲಿಗೆಗೆ ರುಚಿ ಮಾತ್ರ ಕೊಡುತ್ತವೆ. ಆದರೆ ನಮ್ಮ ದೇಹಕ್ಕೆ ಕಹಿಯಾಗಿ ಇರುತ್ತದೆ. ನಮಗೆ ಕಾಯಿಲೆಗಳು ಬಂದರೆ ನಮ್ಮ ಮನಸಲ್ಲೇ ಇಟ್ಟುಕೊಂಡು ಯಾರ ಬಳಿಯೂ



ಹೇಳಿಕೊಳ್ಳದೆ ಕೊರಗುತ್ತೇವೆ. ವೈದ್ಯರ ಬಳಿ ಹೋಗಿ ನಮ್ಮ ಕಾಯಿಲೆ ಬಗ್ಗೆ ಹೇಳಿಕೊಂಡಾಗ ವಿಶೇಷವಾಗಿ ಕ್ಯಾನ್ಸರ್ ಕುರಿತು ಹೇಳಿಕೊಂಡಾಗ ಅದರಿಂದ ಚಿಕಿತ್ಸೆ ಪಡೆದು ಮುಕ್ತಿ ಹೊಂದಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು. ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕರಾದ ಫಾದರ್ ವಿಜಯ್ ಕುಮಾರ್, ಕಾರ್ಯಕರ್ತರಾದ ಅರುಣ್ ಕುಮಾರ್, ಹನುಮಂತ್ ಶ್ರೀಮತಿ ಅಮಿತಾ, ಸವಿತಾ, ರೀಟಾ, ಸಿ ಎಚ್ ಓ, ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತರು, ಇಂಡಿಯನ್ ಕ್ಯಾನ್ಸರ್ ಸೊಸೈಟಿಯ ಸಿಬ್ಬಂದಿ ವರ್ಗದವರು ಹಾಗೂ ಗ್ರಾಮಸ್ಥರು ಸೇರಿದಂತೆ ಒಟ್ಟು 100 ಕ್ಕೂ ಮೇಲ್ಪಟ್ಟು ಜನರು ಶಿಬಿರದಲ್ಲಿ ಭಾಗವಹಿಸಿದ್ದರು.

## “ಹೈನುಗಾರಿಕೆಯಿಂದ ಜೀವನ ಕಟ್ಟಿಕೊಂಡಮಹಿಳೆ”



ಶ್ರೀಮತಿ ಜ್ಞಾನ ದೇವಿ ಗಂಡ ಜಗನ್ನಾಥ್ ಇವರು ಚಿಟುಗುಪ್ಪ ತಾಲೂಕಿನ ವಡ್ಡನ್ಕೆರೆ ಗ್ರಾಮದ ನಿವಾಸಿಯಾಗಿದ್ದು, ಸರೋಜಿನಿ ಸಂಘದ ಅಧ್ಯಕ್ಷರಾಗಿದ್ದಾರೆ. ಇವರು ಸಂಘಕ್ಕೆ ಸೇರಿ 18 ರಿಂದ 19 ವರ್ಷಗಳು ಕಳೆದವು, ಪ್ರಾರಂಭದಿಂದ ಹಲವಾರು ಮಾಹಿತಿ ಕಾರ್ಯಕ್ರಮ, ತರಬೇತಿ ಕಾರ್ಯಾಗಾರಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಸರ್ಕಾರದಿಂದ ಸಿಗುವ ಯೋಜನೆಗಳ ಕುರಿತು ತಿಳಿದುಕೊಂಡರು. ಧೈರ್ಯ ಮತ್ತು ನಾಯಕತ್ವದ ಗುಣವನ್ನು ಹೊಂದಿದ ಇವರು ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಚುನಾಯಿತರಾಗಿ ಐದು ವರ್ಷಗಳ ಕಾಲ ಸೇವೆ ನೀಡಿದ್ದಾರೆ. ಪ್ರಸ್ತುತವಾಗಿ ಮನೆಯ ಎಲ್ಲಾ ಜವಾಬ್ದಾರಿಗಳನ್ನು ನಿಭಾಯಿಸುವುದರ ಜೊತೆಗೆ ವ್ಯವಸಾಯದಲ್ಲಿ ತಮ್ಮನ್ನು ತೊಡಗಿಸಿಕೊಂಡು. ತದನಂತರ ಒಂದು ಎಮ್ಮೆಯನ್ನು ಖರೀದಿ ಮಾಡಿದರು, ಇಂದು ಒಂದು ಎಮ್ಮೆಯಿಂದ 7 ಎಮ್ಮೆಗಳಾಗಿ ಪರಿವರ್ತಿಸಿಕೊಂಡು ಹೈನುಗಾರಿಕೆಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಹೈನುಗಾರಿಕೆಯಿಂದ ಒಂದು ದಿನಕ್ಕೆ ಹದಿನೈದು ಲೀಟರ್ ಹಾಲನ್ನು ಮಾರಿ, 600 ರಿಂದ 700 ಲಾಭವನ್ನು ಪಡೆಯುತ್ತಿದ್ದಾರೆ, ಸದ್ಯದಲ್ಲಿ ಕುಟುಂಬದ ಪರಿಸ್ಥಿತಿ ಮಕ್ಕಳ ಶಿಕ್ಷಣ ಉತ್ತಮ ರೀತಿಯಲ್ಲಿ ಇದೆ ಎಂದು ತಮ್ಮ ಸಂತೋಷವನ್ನು ವ್ಯಕ್ತಪಡಿಸುವುದರೊಂದಿಗೆ, ಆರ್ಬಿಟ್ ಸಂಸ್ಥೆಯು ಮಾಡಿರುವ ಸಹಾಯ ಹಾಗೂ ಮಾರ್ಗದರ್ಶನಕ್ಕೆ ಕೃತಜ್ಞತೆಗಳನ್ನು ಸಲ್ಲಿಸಿದ್ದಾರೆ.

# "ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ"

## "ತಾಯಿಯ ಎದೆ ಹಾಲು ಮಗುವಿಗೆ ಅಮೃತ"



ಜುಲೈ 26 ರಂದು ಹುಮ್ನಾಬಾ ತಾಲೂಕಿನ ದುಬಗುಂಡಿ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ತಾಯಿಯ ಎದೆ ಹಾಲಿನ ಮಹತ್ವದ ಕುರಿತು ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕಾರ್ಯಕರ್ತೆಯಾದ ಶ್ರೀಮತಿ ಮಮತಾ ಅವರು ತಾಯಂದಿರ ಸಭೆಯಲ್ಲಿ ಚರ್ಚಿಸಿದರು. ಶಿಶುವಿನ ಜನನದ ಒಂದು ಗಂಟೆ ಒಳಗೆ ಹಾಲು ಕುಡಿಸುವುದು ಅತಿ ಅವಶ್ಯಕ ಇದರಿಂದಾಗಿ ತಾಯಿ ಮತ್ತು ಮಗುವಿನ ಮಧ್ಯ ಸುಮಧುರ ಭಾಂದವ್ಯ ಬೆಳೆಯುತ್ತದೆ. ಮೊದಲ ಆರು ತಿಂಗಳವರೆಗೆ ಎದೆ ಹಾಲು ಮಾತ್ರ ನೀಡುವುದು ಮತ್ತು ಎರಡು ವರ್ಷ ಅಥವಾ ನಂತರದವರೆಗೆ ಸೂಕ್ತ ಪೂರಕ ಆಹಾರದೊಂದಿಗೆ ಎದೆ ಹಾಲನ್ನು ಮುಂದುವರಿಸುವುದು. ಮಗುವಿಗೆ ಎದೆ ಹಾಲು ಉಣಿಸುವುದರಿಂದ, ತಾಯಿಯ ಎದೆ ಹಾಲು ಹೆಚ್ಚು ಕಾಲ ಉತ್ಪತ್ತಿಯಾಗುತ್ತದೆ. ಪ್ರತಿದಿನ ಕನಿಷ್ಠ 8 ಬಾರಿಯಾದರೂ ಹಾಲುಣಿಸುವುದು ಹಾಗೂ ಮಗುವಿನ ಬೇಡಿಕೆಗೆ ತಕ್ಕಂತೆ ಹಾಲುಣಿಸುವುದು. ತಾಯಿಯೇ ಎದೆಹಾಲು ಪೌಷ್ಟಿಕವಾಗಿದ್ದು, ಇದು ಮಗುವಿನಲ್ಲಿ ರೋಗನಿರೋಧಕ ಶಕ್ತಿ ಹೆಚ್ಚಿಸುತ್ತದೆ. ತಾಯಿಯ ಎದೆ ಹಾಲು ಎಲ್ಲಾ ತರಹದ ಹಾನಿಕಾರಕ ರೋಗಗಳಿಂದ ಮಗುವನ್ನು ರಕ್ಷಿಸುತ್ತದೆ. ಪೂರಕ ಹಾಲುಗಳಾದ ಪ್ರಾಣಿಗಳ ಹಾಲು ಹಾಗೂ ಬಾಟಲಿನ ಹಾಲು ಮಗುವಿನ ಆರೋಗ್ಯಕ್ಕೆ ಹಾಗೂ ಜೀವಕ್ಕೆ ಹಾನಿಕರಕ. ತಾಯಂದಿರು ಮಕ್ಕಳಿಗೆ ಸರಿಯಾದ ಸಮಯಕ್ಕೆ ಪೌಷ್ಟಿಕ ಆಹಾರವನ್ನು ನೀಡುತ್ತಾ, ಅವರ ಬಗ್ಗೆ ಹೆಚ್ಚಿನ ಕಾಳಜಿಯನ್ನು ಬಯಸುವಂಥದ್ದು, ಆದ್ದರಿಂದ ಮಕ್ಕಳ ಉತ್ತಮ ಬೆಳವಣಿಗೆಗೆ ತಾಯಂದಿರ ಪಾತ್ರ ಅತಿ ಮಹತ್ವವಾಗಿದೆ ಎಂದು ಈ ಸಭೆಯಲ್ಲಿ ತಿಳಿಸಲಾಯಿತು.

## "ಡೆಂಗು ಜ್ವರ ನಿಯಂತ್ರಣ ಎಲ್ಲರ ಜವಾಬ್ದಾರಿ"



ಜುಲೈ 18ರಂದು ಹುಮ್ನಾಬಾದ್ ತಾಲೂಕಿನ ಹುಣಸನಾಳ ಗ್ರಾಮದಲ್ಲಿ 20 ಜನ ಮಹಿಳಾ ಸಂಘದ ಸದಸ್ಯರಿಗೆ ಡೆಂಗಿ ಜ್ವರದ ನಿಯಂತ್ರಣದ ಕುರಿತು ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕಾರ್ಯಕರ್ತರಾದ ಶ್ರೀ ಸೂರ್ಯಕಾಂತ್ ರವರು ಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡಿದ್ದರು.ಡೆಂಗಿ ಜ್ವರದ ಮೂಲ ಮಾಹಿತಿಯ ತಿಳಿಸಲಾಯಿತು. ಡೆಂಗಿ ಜ್ವರ ವೈರಸ್ ನಿಂದ ಉಂಟಾಗುವ ಕಾಯಿಲೆ. ಇದು ಸೋಂಕು ಹೊಂದಿದ ಈಡಿಸ್ ಈಜಿಪ್ಟ್ ಸೊಳ್ಳೆ ಕಚ್ಚುವಿಕೆಯಿಂದ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ. ಈ ಸೊಳ್ಳೆಗಳು ಸಾಮಾನ್ಯವಾಗಿ ಸ್ವಚ್ಛ ನೀರಿನಲ್ಲಿ ಸಂತಾನ ಅಭಿವೃದ್ಧಿ ಮಾಡುತ್ತವೆ ಹಾಗೂ ಹಗಲು ಹೊತ್ತಿನಲ್ಲಿ ಮನುಷ್ಯರನ್ನು ಕಚ್ಚುತ್ತವೆ. ಇದ್ದಕ್ಕಿದ್ದಂತೆ ತೀವ್ರ ಜ್ವರ, ವಿಪರಿತ ತಲೆನೋವು, ಕಣ್ಣುಗಳ ಹಿಂಭಾಗ, ಮಾಂಸ ಖಂಡಗಳು ಮತ್ತು ಕೀಲುಗಳಲ್ಲಿ ವಿಪರಿತನ ನೋವು ಕಾಣಿಸಿಕೊಳ್ಳುವುದು, ಈ ರೋಗದ ಪ್ರಮುಖ ಲಕ್ಷಣಗಳು.ಡೆಂಗಿ ಜ್ವರಕ್ಕೆ ಯಾವುದೇ ನಿರ್ದಿಷ್ಟ ಔಷಧಿ ಅಥವಾ ಲಸಿಕೆ ಇರುವುದಿಲ್ಲ. ರೋಗದ ಲಕ್ಷಣಗಳ ಅನುಸಾರ ವೈದ್ಯರಿಂದ ಸೂಕ್ತ ಚಿಕಿತ್ಸೆ ಪಡೆಯಬಹುದು. ಇಂತಹ ಲಕ್ಷಣಗಳು ಕಂಡುಬಂದರೆ ತಕ್ಷಣ ಹತ್ತಿರದ ಸರ್ಕಾರಿ ಆಸ್ಪತ್ರೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯರಲ್ಲಿ ಪರೀಕ್ಷಿಸಿಕೊಂಡು ಸೂಕ್ತ ಚಿಕಿತ್ಸೆ ಪಡೆಯಬೇಕು.ಸೊಳ್ಳೆಗಳ ನಿಯಂತ್ರಣ ಒಂದೇ ಡೆಂಗ್ಯೂ ರೋಗದ ಹತೋಟಿಗೆ ಮುಖ್ಯ ವಿಧಾನ. ಈ ಸೊಳ್ಳೆಗಳನ್ನು ನೀರನ್ನು ಶೇಖರಿಸಿ ಇಡುವ ಸಿಮೆಂಟ್ ತೊಟ್ಟಿ, ಕಲ್ಲು ಚಪ್ಪಟೆಯಿಂದ ನಿರ್ಮಿಸಿದ ತೊಟ್ಟಿ, ಡ್ರಮ್, ಬ್ಯಾರೆಲ್, ಮಣ್ಣಿನ ಮಡಿಕೆ, ಉಪಯೋಗಿಸಿದ ಮರಳು, ಕಲ್ಲು ಮುಂತಾದ ಕಡೆ ಶೇಖರವಾಗುವ ನೀರಿನಲ್ಲಿ ಉತ್ಪತ್ತಿಯಾಗುವುದರಿಂದ, ಈ ರೀತಿ ನೀರು ನಿಲ್ಲದಂತೆ ಎಚ್ಚರಿಕೆ ವಹಿಸಬೇಕು. ನೀರಿನ ತೊಟ್ಟಿ ,ಡ್ರಮ್ಮು, ಬ್ಯಾರೆಲ್, ಏರ್ ಕೂಲರ್ ಇತ್ಯಾದಿಗಳನ್ನು ವಾರಕ್ಕೊಮ್ಮೆ ಖಾಲಿ ಮಾಡಿ, ಒಣಗಿಸಿ ಮತ್ತೆ ಭರ್ತಿ ಮಾಡಿಕೊಳ್ಳುವುದು. ನೀರು ಖಾಲಿ ಮಾಡಲು ಸಾಧ್ಯವಿಲ್ಲದ ತೊಟ್ಟಿ ಮುಂತಾದವುಗಳನ್ನು ಸೊಳ್ಳೆಗಳು ಒಳಗೆ ನುಸುಳದಂತೆ ಸರಿಯಾದ ಮುಚ್ಚಳದಿಂದ ಮುಚ್ಚುವುದು.ಬಯಲಿನಲ್ಲಿರುವ ತ್ಯಾಜ್ಯ ವಸ್ತುಗಳಾದ ಟೈರು, ಎಳೆನೀರು ಚಿಪ್ಪು, ಒಡೆದ ಬಾಟಲಿ ಮುಂತಾದವುಗಳಲ್ಲಿ ಮಳೆ ನೀರು ಸಂಗ್ರಹವಾಗದಂತೆ ಎಚ್ಚರ ವಹಿಸುವುದು ಅಥವಾ ಸೂಕ್ತ ವಿಲಿವಾರಿ ಮಾಡುವುದು.ಸ್ವಯಂ ರಕ್ಷಣಾ ವಿಧಾನಗಳಾದ ಸೊಳ್ಳೆ ನಿರೋಧಕಗಳನ್ನು ಹಾಗೂ ಸೊಳ್ಳೆ ಪರದೆಯನ್ನು ಬಳಸಿ ಸೊಳ್ಳೆಗಳನ್ನ ಕಚ್ಚದಂತೆ ಎಚ್ಚರಿಕೆ ವಹಿಸಿ, ಡೆಂಗಿ ರೋಗ ತಡೆಗಟ್ಟಬಹುದು. ಬನ್ನಿ ಎಲ್ಲರೂ ಪರಿಸರವನ್ನು ಸ್ವಚ್ಛತೆವಾಗಿ ಕಾಪಾಡಿಕೊಳ್ಳುವ ಮುಖಾಂತರ ಡೆಂಗಿ ರೋಗವನ್ನು ತಡೆಗಟ್ಟಲು ಕೈಜೋಡಿಸೋಣ.

## “ಮಕ್ಕಳಿಗೆ ಮೌಲ್ಯ ಮಾಪನ ಹಾಗೂ ಪೋಷಕರ ಸಭೆಯ ಚಟುವಟಿಕೆ”



ಜೂಲೈ 2 ರಂದು ಹುಮ್ನಾಬಾದ್ ತಾಲೂಕಿನ ವಾಂಜರಿ ಕಾಲೋನಿ ಯಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಆರ್ಬಿಟ್ ಸಂಸ್ಥೆಯ ಕಾರ್ಯ ಕರ್ತೆ ಶ್ರೀ ಮತಿ ಕವಿತಾ ಅವರು ಅಂಗನವಾಡಿ ಕೇಂದ್ರದಲ್ಲಿ 30 ಮಕ್ಕಳಿಗೆ ಸ್ಕ್ರಿನಿಂಗ್ ಮಾಡುವ ಮೂಲಕ ವಿಕಲತೆ ಯನ್ನು ಕಂಡು ಹಿಡಿದು 4 ಮಕ್ಕಳಿಗೆ ಕೇಂದ್ರದಲ್ಲಿ ಚಟುವಟಿಕೆ ಮಾಡಿದರು. ಹಾಗೂ ಮಕ್ಕಳ ಪೋಷಕರಿಗೆ ಆರ್ಬಿಟ್ ಸಂಸ್ಥೆಯಲ್ಲಿ ಒಂದು ದಿವಸದ ತರಬೇತಿಯನ್ನು ಆಯೋಜಿಸಿ, ವಿಶೇಷ ಚೇತನ ಮಕ್ಕಳ ಕುರಿತು ಮಾಹಿತಿ ನೀಡಲಾಯಿತು, ಮಕ್ಕಳಿಗೆ ಚಟುವಟಿಕೆ ಮಾಡಿಸುವ ಮೂಲಕ ಧನಾತ್ಮಕ



ಬದಲಾವಣೆಯನ್ನು ಕಂಡುಕೊಳ್ಳಬಹುದು ಎಂದು ಮಾಹಿತಿ ನೀಡಲಾಯಿತು.ಸಭೆಯಲ್ಲಿ ಭಾಗವಹಿಸಿ ಮಾಹಿತಿ ಪಡೆದುಕೊಂಡು ಮಕ್ಕಳಿಗೆ ಒಳ್ಳೆಯ ಪೌಷ್ಟಿಕ ಆಹಾರ ಕೊಡುದು ಹಾಗೂ ಆರೋಗ್ಯ ಕಾಪಾಡುವದು ಪೋಷಕರ ಕರ್ತವ್ಯ ಎಂದು ತಿಳಿಸಲಾಯಿತು.ಪ್ರತಿ ತಿಂಗಳು ಸಂಸ್ಥೆಯ ಕಾರ್ಯಕರ್ತರು ಮಕ್ಕಳಿಗೆ ಚಟುವಟಿಕೆ ಮಾಡಿಸುವ ಮೂಲಕ ಉತ್ತಮ ಬದಲಾವಣೆ ತರಲು ಪ್ರಯತ್ನಿಸುತ್ತಿದ್ದಾರೆ ಎಂದು ಸಂಸ್ಥೆಯ ಕಾರ್ಯ ವೈಖರಿಯನ್ನು ಪೋಷಕರು ವ್ಯಕ್ತಪಡಿಸುತ್ತಾ ಧನ್ಯವಾದಗಳು ತಿಳಿಸಿದರು.

## “ನವಜೀವನ (ಎಲ್.ಎಲ್.ಎಲ್.ಎಫ್) ಕಾರ್ಯಕ್ರಮ”

### “ಮಾನಸಿಕ ಅಸ್ವಸ್ಥರ ಮತ್ತು ಕ್ಯಾನ್ಸರ್ ಜಾಗ್ರತಿ ಕಾರ್ಯಕ್ರಮ”



ಜೂಲೈ 23 ರಂದು ಔರಾದ್ ತಾಲೂಕಿನ ಬಲ್ಲೂರು ಜೆ ಗ್ರಾಮದಲ್ಲಿ, ಅರ್ಬಿಟ್ ಸಂಸ್ಥೆ ಮತ್ತು ಲಿವ್ ಲವ್ ಲಾಫ್ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಅಸ್ವಸ್ಥರ ಮತ್ತು ಕ್ಯಾನ್ಸರ್ ಜಾಗ್ರತಿ ಕಾರ್ಯಕ್ರಮ ನೀಡಲಾಯಿತು. ಈ ಕಾರ್ಯಕ್ರಮದಲಿ ಸಂಪನ್ಮೂಲ ವ್ಯಕ್ತಿಗಳಾದ್ ಆರ್ಬಿಟ್ ಸಂಸ್ಥೆಯ ಎಲ್.ಎಲ್.ಎಲ್.ಎಫ್ ಕಾರ್ಯಕರ್ತರಾದ ಶ್ರೀ ಯೋಹನ ಸಂಪನ್ಮೂಲ ವ್ಯಕ್ತಿಯಾಗಿ ಉಪಸ್ಥಿತರಿದ್ದರು. ಆರೋಗ್ಯ, ಮಾನಸಿಕ ಆರೋಗ್ಯ, ಮಾನಸಿಕ ಕಾಯಿಲೆ ಗುಣಲಕ್ಷಣಗಳು, ಮಾನಸಿಕ ಖಾಯಿಲೆಗೆ ಇರುವ ಸೂಕ್ತ ಚಿಕಿತ್ಸೆ ಕುರಿತು ಮಾಹಿತಿ ನೀಡಲಾಯಿತು.ಜೊತೆಗೆ ಕ್ಯಾನ್ಸರ್ ಮಹಾಮಾರಿಯ ಕುರಿತು ಅರಿವು ಮೂಡಿಸಲಾಯಿತು. ಕ್ಯಾನ್ಸರ್ ಎಂಬುದು ನಮ್ಮ ಶರೀರದಲ್ಲಿ ಆರಂಭವಾಗಿ ಶರೀರದಲ್ಲೇ ಕೊನೆಗೊಳ್ಳುವ ಒಂದು ಕಾಯಿಲೆ. ಈ ಕಾಯಿಲೆಯಿಂದ ಸಂಪೂರ್ಣವಾಗಿ ಗುಣವಾಗಬಹುದು, ಅಥವಾ ರೋಗಿಯನ್ನು ಬಲಿ ತೆಗೆದುಕೊಳ್ಳಬಹುದು.ಕ್ಯಾನ್ಸರ್ ಕಾಯಿಲೆಯೂ ಒಬ್ಬರಿಂದ ಇನ್ನೊಬ್ಬರಿಗೆ ಹರಡುವುದಿಲ್ಲ ಮತ್ತು ಇದು ಹೊರಗಿನಿಂದ ಮನುಷ್ಯನ ಶರೀರಕ್ಕೆ ಅಂಟಿಕೊಳ್ಳುವುದಿಲ್ಲ, ಕ್ಯಾನ್ಸರ್ ಉಂಟು ಮಾಡುವ ಕಾರಣಗಳಾದ ತಂಬಾಕು, ಮದ್ಯಪಾನ, ರಾಸಾಯನಿಕಗಳು ನಮ್ಮ ಶರೀರದಲ್ಲಿ ಕ್ಯಾನ್ಸರ್ ಉಂಟು ಮಾಡಲು ಕಾರಣವಾಗುತ್ತದೆ.ದುಶ್ಚಟದಿಂದ ದೂರವಿರುವ ಮುಖಾಂತರ ಕ್ಯಾನ್ಸರ್ ರೋಗದಿಂದ ಮುಕ್ತಿ ಪಡೆಯಬಹುದು ಎಂದು ಮಾಹಿತಿ ನೀಡಿದರು.

## “ಮಾನಸಿಕ ಆರೋಗ್ಯದ ಕುರಿತು ಜಾಗೃತಿ”



ಜುಲೈ 24.ರಂದು ಆರ್ಬಿಟ್ ಸಂಸ್ಥೆಯ ಕಾರ್ಯಕರ್ತ ಬಬನ್ ರಾಥೋಡ್ ಅವರು ಚಿಕಾಲಿ ಗ್ರಾಮದ ಅಂಗನವಾಡಿಯಲ್ಲಿ ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಮೂಡಿಸಿದರು. ಮಾನಸಿಕ ಆರೋಗ್ಯ, ಮಾನಸಿಕ ಕಾಯಿಲೆ, ಮಾನಸಿಕ ಕಾಯಿಲೆಯ ಲಕ್ಷಣಗಳು ಲಕ್ಷಣಗಳನ್ನು ವಿವರಿಸಿದ್ದರು.ಏಕಾಂತ, ಯಾವುದೇ ಕಾರಣವಿಲ್ಲದೆ ನಗುವುದು, ಯಾವುದೇ ಕಾರಣವಿಲ್ಲದೆ ಅಳುವುದು, ಅವಿವೇಕದ ಅನುಮಾನ, ಕಿವಿಗಳಲ್ಲಿ ಶಬ್ದ ಕೇಳಿದಂತಾಗುವುದು.ಮಾನಸಿಕ ಅಸ್ವಸ್ಥತೆಯ ಕಾರಣಗಳು ಬಾಲ್ಯದ ಕಹಿ ನೆನಪುಗಳು, ಋಣಭಾರ, ನಿಲುವು ಕಳೆದುಕೊಳ್ಳುವುದು, ನಿಲುವು ಕಳೆದುಕೊಳ್ಳುವುದು, ಆಕಸ್ಮಿಕ ಅಪಘಾತಗಳು ಎಂದು ಮಾಹಿತಿ ನೀಡಿದರು.ಭ್ರಾಂತಿ, ದೆವ್ವ, ಮಾಟ-ಮಂತ್ರ ಎಂಬ ಮೂಢನಂಬಿಕೆಯು ಸಮಾಜದಲ್ಲಿದೆ.ಮೇಲಿನ ಲಕ್ಷಣಗಳು ಕಂಡು ಬಂದಲ್ಲಿ ಮನೋವೈದ್ಯರಿಂದ ಚಿಕಿತ್ಸೆ ಪಡೆದು ಉತ್ತಮ ಜೀವನ ನಡೆಸುವಂತೆ ತಿಳಿಸಿದರು.

## "ಯುವಕರಲ್ಲಿ ಮಾನಸಿಕ ಆರೋಗ್ಯ ಜಾಗೃತಿ"



ಜೂಲೈ 08 ರಂದು ಬೀದರ್ ತಾಲೂಕಿನ ಜನವಡಾ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಸಂಯುಕ್ತಶ್ರಯದಲ್ಲಿ, ಕಾರ್ಯಕರ್ತರಾದ ಆನಂದ ಯುವಕರಿಗೆ ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಮೂಡಿಸಿದರು. ಯುವಕರು ಅತಿಯಾಗಿ ಮದ್ಯಪಾನ, ಧೂಮಪಾನ, ಇತರೆ ಮಾದಕ ವಸ್ತುಗಳ ಸೇವನೆಯಿಂದಾಗಿ ಮಾನಸಿಕ ಕಾಯಿಲೆಗಳು ಬರುತ್ತವೆ. ಮಾನಸಿಕ ಕಾಯಿಲೆಯ ಲಕ್ಷಣಗಳಾದ ಭಯ, ಆತಂಕ, ಖಿನ್ನತೆ ಮತ್ತು ಆತ್ಮಹತ್ಯೆ ಆಲೋಚನೆ ಕಂಡುಬರುತ್ತವೆ ಎಂದು ಮಾಹಿತಿ ನೀಡಿದರು. ಈ ಜಾಗೃತಿ ಕಾರ್ಯಕ್ರಮದಲ್ಲಿ 11 ಯುವಕರು ಭಾಗವಹಿಸಿ ಮಾನಸಿಕ ಕಾಯಿಲೆ ಕುರಿತು ಅರಿತುಕೊಂಡರು.

## "ಸರಕಾರಿ ಪ್ರೌಢಶಾಲೆಯಲ್ಲಿ ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ"



ಜುಲೈ 24 ರಂದು ಬಸವಕಲ್ಯಾಣ ತಾಲೂಕಿನ ಕೌಡಿಯಾಳ ಗ್ರಾಮದ ಸರಕಾರಿ ಪ್ರೌಢಶಾಲೆಯಲ್ಲಿ ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡು, ಕ್ಯಾನ್ಸರ್ ಕುರಿತು ಜಾಗೃತಿ ಮೂಡಿಸಲಾಯಿತು.ಕ್ಯಾನ್ಸರ್ ಕ್ಯಾನ್ಸರ್ ಬರುವ ರೀತಿ.ಕ್ಯಾನ್ಸರ್ ನ ವಿಧಗಳು, ಕ್ಯಾನ್ಸರ್ ನ ಲಕ್ಷಣಗಳು, ಕ್ಯಾನ್ಸರ್ ಇಂದ ಆಗುವ ಅನಾಹುತಗಳು, ಹೀಗೆ ಅನೇಕ ರೀತಿಯ ಹಲವಾರು ಕಾರಣಗಳು ಕೊಟ್ಟು ಮಕ್ಕಳಿಗೆ ತಿಳಿ ಹೇಳಿದರು, ಗುಟ್ಕಾ ಸೇವನೆಯಿಂದ, ತಂಬಾಕು ಸೇವನೆಯಿಂದ, ಮದ್ಯಪಾನ ಮಾಡುವುದರಿಂದ ಕ್ಯಾನ್ಸರ್ ಕಾಣಿಸಿಕೊಳ್ಳುತ್ತದೆ, ಅದೇ ರೀತಿ ಸ್ತ್ರೀಯರಿಗೆ ಗರ್ಭಕೋಶದಲ್ಲಿ ಹಾಗೂ ಸ್ಥಳದಲ್ಲಿ ಕಾಣಿಸಿಕೊಳ್ಳುತ್ತದೆ. ಸ್ತ್ರೀಯರು ಗುರುತು ಮತಿಯಾದ ಸಮಯದಲ್ಲಿ ಬಟ್ಟೆ ಗಳು ಸ್ವಚ್ಛವಾಗಿ ಇಡದೆ ಕಾರಣ, ಮತ್ತು ಬಟ್ಟೆ ಗಳ ಮೇಲೆ ಸೂರ್ಯನ ಕಿರಣಗಳು ಬೀಳದೆ ಇರುವ ಕಾರಣಗಳಿಂದ ಕ್ಯಾನ್ಸರ್ ಬರಬಹುದು. ಹೇಗೆ ಅನೇಕ ರೀತಿಯ ಕಾರಣಗಳನ್ನು ಮಕ್ಕಳಿಗೆ ತಿಳಿ ಹೇಳುತ್ತಾ ಕ್ಯಾನ್ಸರ್ ಬಗ್ಗೆ ಹೆಚ್ಚು ಕಾಳಜಿ ವಹಿಸಿಕೊಳ್ಳುವಂತೆ, ತಿಳಿಸಲಾಯಿತು.ಈ ಕಾರ್ಯಕ್ರಮದಲ್ಲಿ ಶಿಕ್ಷಕರು ಮತ್ತು ಮಕ್ಕಳು ಸೇರಿ ಒಟ್ಟು 40 ಜನ ಭಾಗವಹಿಸಿದ್ದರು.

## "ಶಾಲಾ ಮಕ್ಕಳಿಗೂ ಹಾಗು ಶಿಕ್ಷಕರಿಗು ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಕಾರ್ಯಕ್ರಮ"



ಜುಲೈ 27 ರಂದು ಬಸವಕಲ್ಯಾಣ ತಾಲೂಕಿನ ನಾರಾಯಣಪುರ ಗ್ರಾಮದ ಸರಕಾರಿ ಪ್ರೌಡ ಶಾಲೆಯಲ್ಲಿ, ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯ ಕ್ರಮದ ಸಂಯುಕ್ತ ಆಶ್ರಯದಲ್ಲಿ, ಶಾಲಾ ಮಕ್ಕಳಿಗೂ ಹಾಗು ಶಿಕ್ಷಕರಿಗು ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯ ಕ್ರಮದಲ್ಲಿ, ಸಂಪನ್ಮೂಲ ವ್ಯಕ್ತಿಯಾಗಿ ಶ್ರೀಮತಿ ಸುಜಾತ ಅವರು ಮಾತನಾಡಿದರು, ಮಾನಸಿಕ ಆರೋಗ್ಯ, ಮಾನಸಿಕ ಕಾಯಿಲೆಗೆ ಒಳಗಾದ ವ್ಯಕ್ತಿಯ ಲಕ್ಷಣಗಳು ಮತ್ತು ಈ ರೋಗಕ್ಕೆ ಕಾರಣಗಳು ತಿಳಿಸಿದರು. ಮಾನಸಿಕ ಅಸ್ವಸ್ಥರನ್ನು ಪ್ರಾಥಮಿಕವಾಗಿ ಪತ್ತೆ ಹಚ್ಚಿ, ಅವರನ್ನು ಜಿಲ್ಲಾ ಮಾನಸಿಕ ಆರೋಗ್ಯ ಶಿಬಿರಕ್ಕೆ ತಂದು, ಮನೋ ವೈದ್ಯರಿಂದ ಉಚಿತ ತಪಾಸಣೆ, ಚಿಕಿತ್ಸೆ ಹಾಗೂ ಆಪ್ತ ಸಮಾಲೋಚನೆ ಮೂಲಕ ಸ್ಪಂದಿಸಿ, ಸಮಾಜದ ಮುಖ್ಯವಾಹಿನಿಗೆ ತಂದು ಸಮುದಾಯ ಆಧಾರಿತ ಪುನರ್ವಸತಿ ಕಲ್ಪಿಸುವುದು ನವ ಜೀವನ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ ಎಂದು ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳು, ಶಿಕ್ಷಕರು ಸೇರಿ ಒಟ್ಟು 42 ಜನರು ಭಾಗವಹಿಸಿ ಇದರ ಸದುಪಯೋಗ ಪಡೆದು ಕೊಂಡರು.

## "ಮಾನಸಿಕ ರೋಗದ ಕುರಿತು ಮಾಹಿತಿ"



ಜುಲೈ 24 ರಂದು ಬೀದರ್ ತಾಲೂಕಿನ ಮಲ್ಕಾಪುರ್ ಗ್ರಾಮದಲ್ಲಿ ಸರ್ಕರಿ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಆರ್ಬಿಟ್ ಸಂಸ್ಥೆ ಹಾಗು ನವಜೀವನ ಸಹಯೋಗದಲ್ಲಿ ಕಾರ್ಯಕರ್ತರಾದ ಅರುಣ್ ರವರು ಶಾಲಾ ಮಕ್ಕಳಿಗೆ ಮಾನಸಿಕ ರೋಗದ ಕುರಿತು ಮಾಹಿತಿ ನೀಡಿದರು. ಮಾನಸಿಕ ಕಾಯಿಲೆಯು ಒಂದು ಮೆದುಳಿನ ಕಾಯಿಲೆಯಾಗಿದೆ ಇಂತಹ ಖಾಯಿಲೆಯಿಂದ ನರಳುತ್ತಿರುವ ವ್ಯಕ್ತಿಯ ಆಲೋಚನೆಗಳಲ್ಲಿ ಮತ್ತು ಭಾವನೆಗಳಲ್ಲಿ ಏರುಪೇರು ಆಗುವುದು. ಮಾನಸಿಕ ರೊಗಕ್ಕೆ ಕಾರಣಗಳು,ಮಾನಸಿಕ ಕಾಯಿಲೆಯ ಲಕ್ಷಣಗಳು ಮತ್ತೂ ಚಿಕಿತ್ಸೆ ಬಗ್ಗೆ ಅರಿವು ಮೂಡಿಸಲಾಯಿತು, ಹಾಗು ಮೂಢನಂಬಿಕೆಗೆ ಒಳಗಾಗದೆ ಕೂಡಲೆ ಸೂಕ್ತ ಚಿಕಿತ್ಸೆ ಪಡೆದುಕೊಳ್ಳುವಂತೆ ಮಾಹಿತಿ ನೀಡಿ.ಈ ಜಾಗೃತಿ ಕಾರ್ಯಕ್ರಮದಲ್ಲಿ 42 ಜನ ಶಾಲೆಯ ಮಕ್ಕಳು ಉಪಸ್ಥಿತರಿದ್ದು ಮಾನಸಿಕ ಆರೋಗ್ಯದ ಕುರಿತು ಮಾಹಿತಿ ಪಡೆದುಕೊಂಡರು.

## “ಸ್ಪರ್ಶಕ್ಯಾನ್ಸರ ಕುರಿತು ಜಾಗೃತಿ ಕಾರ್ಯಕ್ರಮ”



ಜುಲೈ 10 ರಂದು ಮುರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಆರ್ಬಿಟ ಸಂಸ್ಥೆ ಹುಮನಾಬಾದ ಮತ್ತು ಅಜೀಮ್ ಪ್ರೇಮ್ ಜೀ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಕ್ಯಾನ್ಸರ್ ಕುರಿತು ಜಾಗೃತಿ ಕಾರ್ಯಕ್ರಮ ನಡೆಸಲಾಯಿತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ನವ ಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಅಮರ್ ರವರು ಮಾಹಿತಿ ನೀಡಿದರು. ಕ್ಯಾನ್ಸರ್ ಕಾಯಿಲೆ ಹೇಗೆ ಬರುತ್ತದೆ ಮತ್ತು ಲಕ್ಷಣಗಳ ಹಾಗೂ ಸೂಕ್ತ ಚಿಕಿತ್ಸೆಯ ಕುರಿತು ಮಾಹಿತಿ ನೀಡಿದರು. ಈ ಜಾಗ್ರತಿ ಕಾರ್ಯಕ್ರಮದಲ್ಲಿ ಒಟ್ಟು 98 ಜನ ಶಾಲಾ ಮಕಳು ಭಾಗವಹಿಸಿ ಮಾಹಿತಿ ಪಡೆದುಕೊಂಡರು.



ಜುಲೈ 16 ರಂದು ಭಾಲ್ಕಿ ತಾಲೂಕಿನ ಚಳಕಾಪೂರ ಗ್ರಾಮದಲ್ಲಿ ಶ್ರೀ ಸಿದ್ದರೋಢ ಸ್ವಾಮೀಜಿ ಸ್ವಾತಂತ್ರ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಲೀವ್.ಲವ್.ಲಾಫ್.ಫೌಂಡೇಶನ್ ಸಂಯುಕ್ತಾಶ್ರಯದಲ್ಲಿ ಕ್ಯಾನ್ಸರ್ ರೋಗದ ಕುರಿತು ಮಾಹಿತಿಯನ್ನು ನೀಡಲಾಯಿತು. ಈ ಜಾಗೃತಿ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿ ಶ್ರೀ ಕುಮಾರ್ ಮಾತನಾಡಿ ಕ್ಯಾನ್ಸರ್ ರೋಗವನ್ನು ಪ್ರಾರಂಭದಲ್ಲಿ ಪತ್ತೆಹಚ್ಚಿ ಸೂಕ್ತ ಚಿಕಿತ್ಸೆ ಯಿಂದ ಗುಣಪಡಿಸಬಹುದು ಎಂದು ಮಾಹಿತಿ ನೀಡಿದರು. ಈ ಜಾಗೃತಿ ಕಾರ್ಯಕ್ರಮದಲ್ಲಿ ಒಟ್ಟು 42 ಜನ ಕಾಲೇಜ ಮಕ್ಕಳು ಉಪಸ್ಥಿತರಿದ್ದರು ಕ್ಯಾನ್ಸರ್ ಕುರಿತು ಅರಿವು ಮೂಡಿಸಿಕೊಂಡರು.



ಜುಲೈ 12 ರಂದು ಭಾಲ್ಕಿ ತಾಲೂಕಿನ ದಾಡಗಿ ಗ್ರಾಮದಲ್ಲಿ ಸರಕಾರಿ ಪ್ರೌಢಶಾಲೆಯ ಮಕ್ಕಳಿಗೆ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಲೀವ್.ಲವ್.ಲಾಫ್.ಫೌಂಡೇಶನ್ ಸಂಯುಕ್ತಾಶ್ರಯದಲ್ಲಿ ಕ್ಯಾನ್ಸರ್ ರೋಗದ ಕುರಿತು ಮಾಹಿತಿಯನ್ನು ನೀಡಲಾಯಿತು. ಈ ಜಾಗೃತಿ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿ ಕುಮಾರ್ ಮಾತನಾಡಿ ಕ್ಯಾನ್ಸರ್ ರೋಗವನ್ನು ಪ್ರಾರಂಭದಲ್ಲಿ ಪತ್ತೆಹಚ್ಚಿ ಸೂಕ್ತ ಚಿಕಿತ್ಸೆಯಿಂದ ಗುಣಪಡಿಸಬಹುದು ಎಂದು ಮಾಹಿತಿ ನೀಡಿದರು. ಈ ಜಾಗೃತಿ ಕಾರ್ಯಕ್ರಮದಲ್ಲಿ ಒಟ್ಟು 48 ಜನ ಶಾಲೆಯ ಮಕ್ಕಳು ಉಪಸ್ಥಿತರಿದ್ದು ಕ್ಯಾನ್ಸರ್ ಕುರಿತು ಜಾಗೃತಿ ಮೂಡಿಸಿಕೊಂಡರು.



ಜುಲೈ 11 ರಂದು ಭಾಲ್ಕಿ ತಾಲೂಕಿನ ಎಣಕೂರ ಗ್ರಾಮದಲ್ಲಿ ಸರಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆ ಮಕ್ಕಳಿಗೆ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಲೀವ್ ಲವ್ ಲಾಫ್ ಫೌಂಡೇಶನ್ ಸಂಯುಕ್ತಾಶ್ರಯದಲ್ಲಿ ಕ್ಯಾನ್ಸರ್ ರೋಗದ ಕುರಿತು ಮಾಹಿತಿಯನ್ನು ನೀಡಲಾಯಿತು. ಈ ಜಾಗೃತಿ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿ ಕುಮಾರ್ ಮಾತನಾಡಿದರು. ಕ್ಯಾನ್ಸರ್ ರೋಗವನ್ನು ಪ್ರಾಥಮಿಕ ಹಂತದಲ್ಲಿ ಪತ್ತೆಹಚ್ಚಿ ಸೂಕ್ತ ಚಿಕಿತ್ಸೆಯ ಮೂಲಕ ಗುಣಪಡಿಸಬಹುದು ಎಂದು ಮಾಹಿತಿ ನೀಡಿದರು. ಈ ಜಾಗೃತಿ ಕಾರ್ಯಕ್ರಮದಲ್ಲಿ ಒಟ್ಟು 45 ಜನ ಶಾಲೆಯ ಮಕ್ಕಳು ಉಪಸ್ಥಿತರಿದ್ದರು.



ಜುಲೈ 12 ರಂದು ಭಾಲ್ಕಿ ತಾಲೂಕಿನ ದಾಡಗಿ ಗ್ರಾಮದಲ್ಲಿ ಸರಕಾರಿ ಪ್ರೌಢಶಾಲೆಯ ಮಕ್ಕಳಿಗೆ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಲೀವ್ ಲವ್ ಲಾಫ್ ಫೌಂಡೇಶನ್ ಸಂಯುಕ್ತಾಶ್ರಯದಲ್ಲಿ ಕ್ಯಾನ್ಸರ್ ರೋಗದ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.. ಈ ಜಾಗೃತಿ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿ ಕಾರ್ಯಕರ್ತರಾದ ಶ್ರೀ ಕುಮಾರ್ ಮಾತನಾಡಿದರು. ಕ್ಯಾನ್ಸರ್ ರೋಗವನ್ನು ಪ್ರಾರಂಭಿಕ ಹಂತದಲ್ಲಿ ಪತ್ತೆ ಹಚ್ಚುವ ಮೂಲಕ ಸೂಕ್ತ ಚಿಕಿತ್ಸೆ ಯಿಂದ ಗುಣಪಡಿಸಬಹುದು ಎಂದು ಮಾಹಿತಿ ನೀಡಿದರು.ಈ ಜಾಗೃತಿ ಕಾರ್ಯಕ್ರಮದಲ್ಲಿ ಒಟ್ಟು 48 ಜನ ಶಾಲೆಯ ಮಕ್ಕಳು ಉಪಸ್ಥಿತರಿದ್ದು ಕ್ಯಾನ್ಸರ್ ಕುರಿತು ಜಾಗೃತಿ ಮೂಡಿಸಿಕೊಂಡರು.

## “ಮಾನಸಿಕ ಆರೋಗ್ಯದ ಅರವಿನ ಕಾರ್ಯಕ್ರಮ”



ಜುಲೈ 12ನೇ ತಾರೀಕಿನಂದು ಭಾಲ್ಕಿ ತಾಲೂಕಿನ ತೆಲಗಾಂವ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯ ಸಿಬ್ಬಂದಿ ಮತ್ತು ಮಕ್ಕಳಿಗೆ ಮಾನಸಿಕ ಆರೋಗ್ಯದ ಅರವಿನ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.ಮಕ್ಕಳಿಗೆ ಭಿತ್ತಿ ಚಿತ್ರಗಳು ಮತ್ತು ಪೋಸ್ಟರ್ ಮುಖಾಂತರ ಮಾನಸಿಕ ರೋಗದ ಬಗ್ಗೆ ತಿಳಿ ಹೇಳಲಾಯಿತು. ಮಾನಸಿಕ ರೋಗದ ಲಕ್ಷಣಗಳು, ಮಾನಸಿಕ ರೋಗದಲ್ಲಿ ವರ್ತಿಸುವಂತ ವ್ಯಕ್ತಿಯ ವರ್ತನೆ ಮತ್ತು ಮಾನಸಿಕ ರೋಗಕ್ಕೆ ಡಿ.ಎಂ.ಎಚ್.ಪಿ ಕ್ಯಾಂಪ್ ಸಹಾಯಕತೆ ಮತ್ತು ಡಿ.ಎಮ್.ಹೆಚ್.ಪಿ ಕಾರ್ಯಕ್ರಮದಡಿಯಲ್ಲಿ ದೊರೆಯುವಂತಹ ಚಿಕಿತ್ಸೆಯ ಕುರಿತು ಮಾಹಿತಿಯನ್ನು ಒದಗಿಸಲಾಯಿತು. ಈ ಒಂದು ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯ ಗುರುಗಳು ಹಾಗೂ ಸಹ ಸಿಬ್ಬಂದಿ ವರ್ಗದವರು ಹಾಗೂ ಮಕ್ಕಳು ಭಾಗವಹಿಸಿ ಅರಿವಿನ ಕಾರ್ಯಕ್ರಮದ ಮಾಹಿತಿ ಪಡೆದುಕೊಂಡರು.

## “ಮಾನಸಿಕ ಅಸ್ವಸ್ಥರ ಹಾಗೂ ಕ್ಯಾನ್ಸರ್ ಕುರಿತು ಜಾಗ್ರತಿ ಕಾರ್ಯಕ್ರಮ”



ಜೂಲೈ 09 ರಂದು ಔರಾದ್ ತಾಲ್ಲೂಕಿನ ಸರಕಾರಿ ಕನ್ಯಾ ಪ್ರೌಢಶಾಲೆಯಲ್ಲಿ ಅರ್ಬಿಟ್ ಸಂಸ್ಥೆ ಮತ್ತು ಲವ್.ಲವ್.ಲಾಫ್ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಅಸ್ವಸ್ಥರ ಹಾಗೂ ಕ್ಯಾನ್ಸರ್ ಕುರಿತು ಜಾಗ್ರತಿ ಕಾರ್ಯಕ್ರಮ ನೀಡಲಾಯಿತು. ಈ ಕಾರ್ಯಕ್ರಮದಲಿ ಸಂಪನ್ಮೂಲ ವ್ಯಕ್ತಿಗಳಾಗಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀ ಯೋಹನ ಉಪಸ್ಥಿತರಿದ್ದರು. ಮಾನಸಿಕ ಆರೋಗ್ಯ.ಮಾನಸಿಕ ಕಾಯಿಲೆ ಗುಣಲಕ್ಷಣಗಳು. ಮಾನಸಿಕ ಖಾಯಿಲೆ ಸಂಬಂಧಿಸಿದ ಚಿಕಿತ್ಸೆ ಕುರಿತು ಮಾಹಿತಿ ನೀಡುವುದರ ಜೊತೆಗೆ ಕ್ಯಾನ್ಸರ್ ಮಹಾಮಾರಿಯ ವಿಧಗಳಾದ ಗಂಟಲಿನ ಕ್ಯಾನ್ಸರ್, ಬಾಯಿ ಕ್ಯಾನ್ಸರ್, ಮೂಳೆ ಕ್ಯಾನ್ಸರ್ ಕ್ಯಾನ್ಸರ್ ತಡೆಗಟ್ಟಲು ಅನುಸರಿಸಬೇಕಾದ ಜೀವನ ಕ್ರಮ, ತಂಬಾಕು ಸೇವಿಸಬಾರದು, ಒಳ್ಳೆಯ ಆರೋಗ್ಯಕರ ಆಹಾರ ಸೇವಿಸಬೇಕು, ಯಾವುದೇ ಮಾದಕ ವಸ್ತುಗಳನು ಸೇವಿಸಬಾರದು. ಮಾನಸಿಕ ಆರೋಗ್ಯದ ಕುರಿತು ಸಮಸ್ಯೆ ಕಂಡು ಬಂದಲ್ಲಿ ಸಂಸ್ಥೆಯ ಸಹಾಯ ವಾಣಿ ಸಂಖ್ಯೆಗೆ ಕರೆ ಮಾಡಿ ಸೂಕ್ತ ಮಾರ್ಗದರ್ಶನ ಪಡೆದುಕೊಳ್ಳುವಂತೆ ತಿಳಿಸಲಾಯಿತು. ಸಂಸ್ಥೆಯ ಸಹಾಯ ಮಾಡಿ ಸಂಖ್ಯೆ 9036664271. ಈ ಕಾರ್ಯಕ್ರಮದಲ್ಲಿ 25–30 ವಿದ್ಯಾರ್ಥಿನಿಯರೂ ಭಾಗವಹಿಸಿ ಕ್ಯಾನ್ಸರ್ ಹಾಗೂ ಮಾನಸಿಕ ಆರೋಗ್ಯದ ಕುರಿತು ಮಾಹಿತಿ ಪಡೆದುಕೊಂಡರು.

# ಸೇವಾ ಸಂಗಮ ಸಂಸ್ಥೆ, ಕಲಬುರಗಿ

## “ಉಜ್ಜೀವನ ಕಾರ್ಯಕ್ರಮ”

## “ಕೈತೋಟದ ಬೀಜವನ್ನು ವಿತರಿಸುವ ಮೂಲಕ ವನ ಮಹೋತ್ಸವ ಕಾರ್ಯಕ್ರಮ”



ಜುಲೈ 18 ರಂದು ತಿಳುಗೋಳ ಗ್ರಾಮಕ್ಕೆ ತೆರಳಿ, ಸೇವಾ ಸಂಗಮ ಸಂಸ್ಥೆಯ ಉಜ್ಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ನವೀನರವರು ಸಂಘದ ಮಹಿಳೆಯರಿಗೆ ಮತ್ತು ರೈತರಿಗೆ 20 ಸಸಿಗಳನ್ನು ನೀಡುವ ಮೂಲಕ ಮತ್ತು 10 ಜನರಿಗೆ ಕೈತೋಟದ ಬೀಜವನ್ನು ವಿತರಿಸುವ ಮೂಲಕ ವನ ಮಹೋತ್ಸವ ಕಾರ್ಯಕ್ರಮವನ್ನು ಆಚರಣೆ ಮಾಡಲಾಯಿತ್ತು. ಸಂಘದ ಮಹಿಳೆಯರಿಗೆ ಮತ್ತು ರೈತರಿಗೆ, ಪ್ರತಿ ವರ್ಷ ಕಲಬುರಗಿ ಜಿಲ್ಲೆಯಲ್ಲಿ ಅತಿ ಹೆಚ್ಚು ಬಿಸಿಲಿನ ಇರುವುದರಿಂದ, ಅದನ್ನು ಕಡಿಮೆ ಮಾಡಲು ಗಿಡ–ಮರಗಳನ್ನು ಹಚ್ಚುವ ಮೂಲಕ ಹಸಿರೀಕರಣಕ್ಕೆ ಮುಂದಾಗುವಂತೆ ಕರೆ ನೀಡಿದರು. ಪರಿಸರ ಬೆಳೆಸುವುದರಿಂದ, ಮಳೆಯ ಸಾಂದ್ರತೆ ಹೆಚ್ಚಾಗುವುದು, ಹಾಗೂ ವಾಯು ಮಾಲಿನ್ಯ ತಡೆಗಟ್ಟುವುದು, ಇದ್ದರಿಂದ ಮಾನವನಿಗೆ ಶುದ್ದ ಗಾಳಿ, ನೀರು, ಆಹಾರ, ದೋರೆಯುವುದರಿಂದ ನಮ್ಮೆಲ್ಲರ ಉತ್ತಮ ಜೀವನಕ್ಕೆ ಅನುಕೂಲವಾಗಿ ಪರಿಣಮಿಸುವುದು.ರೈತರ ಹೋಲಕ್ಕೆ ಭೇಟಿ ನೀಡಿ 4 ಸಸಿಗಳನ್ನು ನೀಡಲಾಯಿತು. ಡಾಕ್ಟರ ಮಲ್ಲಿಕಾರ್ಜುನ ವನಮಹೋತ್ಸವದ ಕುರಿತು ಜನರಲ್ಲಿ ಜಾಗೃತಿ ಮೂಡಿಸಿದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅಥಿತಿಗಳಾದ ಡಾಕ್ಟರ ಮಲ್ಲಿಕಾರ್ಜುನ ಆರೋಗ್ಯ ಅಧಿಕಾರಿಗಳು) ಸಿಸ್ಟರ ಸನಿತಾ, ನಾಗಮ್ಮ ಮತ್ತು ಆಶಾ ಕಾರ್ಯಕರ್ತೆಯರಾದ ಸಂಗಿತ, ಗ್ರಾಮ ಪಂಚಯಿತಿಯ ಸದಸ್ಯರು, ವಿಶ್ವನಾಥ, ಅಂಗನವಾಡಿ ಕಾರ್ಯಕರ್ತೆಯರಾದ ನಿಂಗಮ ಮತ್ತು ಶಿಲ್ಪ ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿ ಒಟ್ಟು 35 ಜನರು ಭಾಗವಹಿಸಿ ಈ ಮಾಹಿತಿಯ ಪ್ರೇರಣೆಯನ್ನು ಪಡೆದುಕೊಂಡರು.



## “ವನ ಮಹೋತ್ಸವ ಕಾರ್ಯಕ್ರಮ”



ಜುಲೈ 15ರಂದು ಸೇವಾ ಸಂಗಮ ಸಂಸ್ಥೆಯ ಉಜ್ಜೀವನ ಕಾರ್ಯಕ್ರಮದ ಯೋಜನೆ ಅಡಿಯಲ್ಲಿ ಕಲಬುರಗಿ ಜಿಲ್ಲೆಯ ಸೀತನೂರ ಗ್ರಾಮದಲ್ಲಿ ವನಮಹೋತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಯಿತ್ತು. ಸಸಿಗಳು ನೆಡುವುದರ ಮೂಲಕ ಆಚಾರಿಸುವ ಹಬ್ಬವೇ ವನಮಹೋತ್ಸವ, ಪ್ರತಿ ವರ್ಷ ವನಮಹೋತ್ಸವ ಆಚಾರಣೆ ಮಾಡುವ ಮೂಲಕ, ಗ್ರಾಮದಲ್ಲಿ ಪ್ರತಿಯೋಬ್ಬರು ತಮ್ಮ ಮನೆಯ ಸುತ್ತ ಮುತ್ತ ಮತ್ತು ಹೋಲಗಳಲ್ಲಿ ಆದಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಸಸಿಗಳನ್ನು ನೆಡುವಂತೆ ಉಜ್ಜೀವನ ಕಾರ್ಯಕ್ರಮದ ಕಾರ್ಯಕರ್ತಯಾದ ಶ್ರೀಮತಿ ನಂದಿನಿ ಜನರಲಿ ಜಾಗೃತಿ ಮೂಡಿಸಿದರು. ಈ ಸಂದರ್ಭದಲ್ಲಿ 25 ಸಸಿಗಳನ್ನು ರೈತರಿಗೆ ಮತ್ತು ಸಮುದಾಯದ ಮುಖಂಡರಿಗೆ ವಿತರಿಸಲಾಯಿತ್ತು.



ಜುಲೈ 19 ರಂದು ಸೇವಾ ಸಂಗಮ ಸಂಸ್ಥೆಯ ಉಜ್ಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಕುಮಾರ ನವಿನರವರು ವರಮಾಹಾ ಲಕ್ಷ್ಮಿ ಸಂಘದ 10 ಮಹಿಳೆಯರಿಗೆ ಕೈತೋಟದ ಬೀಜವನ್ನು ವಿತರಿಸಲಾಯಿತ್ತು. ಈ ಕಾರ್ಯಕ್ರಮದಲ್ಲಿ ಸಂಘದ ಮಹಿಳೆಯರು ಮನೆಯ ಅಂಗಳದಲ್ಲಿ ಕೈತೋಟವನ್ನು ನಿರ್ಮಿಸಿಕೊಂಡು, ಶುದ್ದ ಆಹಾರವನ್ನು ಸೇವಿಸಬೇಕು, ಯಾವುದೆ ರಾಸಾಯನಿಕ ಗೊಬ್ಬರ ಬಳಸದೆ, ಸಾವಯವ ಗೊಬ್ಬರವನ್ನು ಬಳಸಬೇಕು, ಇದ್ದರಿಂದ ಮನುಷ್ಯನಿಗೆ ಒಳ್ಳೆಯ ಆರೋಗ್ಯ ಲಭಿಸುವುದು ಎಂದು ತಿಳಿಸಲಾಯಿತ್ತು. ಕೈತೋಟ ಮಾಡಲು ಬೀಜಗಳನ್ನು ಪುನರ ಶೇಖಣೆ ಮಾಡಿಕೊಳುವುದು, ಮತ್ತು ಮಾರುಕಟ್ಟೆಯಿಂದ ತರಕಾರಿಗಳನ್ನು ತರುವುದು ನಿಲ್ಲಿಸಿ ಹಣ ಉಳಿಸುವುದು.ಫರಹತಬಾದ, ಪಾಣೇಗಾವ, ತಿಳುಗೊಳ, ಗ್ರಾಮದಲ್ಲಿ ಕೈತೋಟದ ಬೀಜಗಳನ್ನು ಕೊಡಲಾಯಿತ್ತು. ಈ ಕಾರ್ಯಕ್ರಮದಲ್ಲಿ 14 ಜನರು ಭಾಗವಹಿಸಿ ಮಾಹಿತಿಯ ಪ್ರೇರಣೆಯನ್ನು ಪಡೆದುಕೊಂಡರು.



ಜುಲೈ 19 ರಂದು ಸೇವಾ ಸಂಗಮ ಸಂಸ್ಥೆಯ, ಉಜ್ಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ನವೀನರವರು, ಹೊನ್ನಕಿರಣಗಿ ಗ್ರಾಮಕ್ಕೆ ಭೇಟಿ ನೀಡುವ ಮೂಲಕ, ಸಂಘದ ಮಹಿಳೆಯರಿಗೆ ಉಜ್ಜೀವನ ಕಾರ್ಯಕ್ರಮದ ಮೂಲಕ ಹತ್ತು ಜನರಿಗೆ ಕೈತೋಟದ ಬೀಜವನ್ನು ವಿತರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಸಂಘದ ಮಹಿಳೆಯರಿಗೆ, ಮನೆಯಂಗಳದಲ್ಲಿ ಕೈತೋಟವನ್ನು ನಿರ್ಮಿಸಿಕೊಂಡು, ಶುದ್ದ ಆಹಾರವನ್ನು ಸೇವಿಸಬೇಕು, ಯಾವುದೇ ರಾಸಯನಿಕ ಗೊಬ್ಬರವನ್ನು ಬಳಸದೆ ಸಾವಯವ ಗೊಬ್ಬರವನ್ನು ಬಳಸಬೇಕು.ಇದರಿಂದ ಮನುಷ್ಯನಿಗೆ ಒಳೆಯ ಆರೋಗ್ಯ ಲಭಿಸುವುದು ಎಂದು ತಿಳಿಸಲಾಯಿತ್ತು. ಮುಂದಿನ ವರ್ಷದಲ್ಲಿ ಕೈತೋಟ ಮಾಡಲು ಬೀಜಗಳನ್ನು ಪುನ ಶೇಖರಣೆ ಮಾಡುವಂತೆ ತಿಳಿಸಲಾಯಿತು.



ಜೂನ್ 5.2024 ರಂದು ಫರಹತಬಾದ ಗ್ರಾಮದಲ್ಲಿ, ಸೇವಾ ಸಂಗಮ ಸಂಸ್ಥೆಯ, ಉಜ್ಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ನವೀನ್‌ರವರು, ಸಮುದಾಯದ ರೈತರಿಗೆ ಮತ್ತು ಮಹಿಳೆಯರಿಗೆ 10 ಸಸಿಗಳನ್ನು ನೀಡುವ ಮೂಲಕ, ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು. 1972 ರಲ್ಲಿ ವಿಶ್ವಸಂಸ್ಥೆ ಸಾಮಾನ್ಯ ಸಭೆಯಲ್ಲಿ 143 ದೇಶಗಳ ಪ್ರತಿನಿಧಿಗಳು ಪಾಲ್ಗೊಂಡ್ದರು.ಮಾನವ ಮತ್ತು ಪರಿಸರದ ಸುದಿರ್ಘಚರ್ಚೆ ನಡೆದು ನಿರ್ಣಯಕ್ಕೆ ಬರಲಾಯಿತ್ತು .ಆ ನಿರ್ಣಯವೇನೆಂದರೆ ಜೂನ 05 ರಂದು ಜಗತ್ತಿನಾದ್ಯಂತ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸುವುದು.ಇದರ ಮೂಲ ಉದ್ದೇಶವೇನೆಂದರೆ ಪ್ರತಿಯೊಬ್ಬರಲ್ಲಿ ಪರಿಸರ ಕುರಿತು ಜಾಗೃತಿ ಮೂಡಿಸುವುದಾಗಿತ್ತು.ಮಾನವನು ನೆಮ್ಮದಿಯ ಜೀವನವನ್ನು ನಡೆಸಬೇಕಾದರೆ ಪರಿಸರವನ್ನು ಉಳಿಸಿ ಬೆಳೆಸಬೇಕಾಗುತ್ತದೆ ಇದು ಇಂದಿನ ತುರ್ತು ಅಗತ್ಯವಾಗಿದೆ ಎಂದು ಈ ಸಂದರ್ಭದಲ್ಲಿ ಕಾರ್ಯಕರ್ತರು ಮಾಹಿತಿ ನೀಡಿದರು.ಇರುವುದೊಂದೇ ಭೂಮಿ, ಇದನ್ನು ಮುಂದಿನ ಪೀಳಿಗೆಗೆ ಉಳಿಸಿಕೊಂಡು ಹೋಗುವುದು ನಮ್ಮೆಲ್ಲರಕರ್ತವ್ಯ.ಗ್ರಾಮದ ಹಸಿರು ಅಭಿಯನಕ್ಕೆ ಪ್ರತಿಯೊಂದು ಕುಟುಂಬ ಜೂನ 05 ರಂದು ಪರಿಸರ ದಿನಾಚರಣೆಯನ್ನು ಸಸಿಗಳನ್ನು ನೆಡುವ ಮೂಲಕ ಆಚರಿಸಬೇಕೆಂದು ಗ್ರಾಮಸ್ಥರಲ್ಲಿ ಮನವಿ ಮಾಡಿದರು.

## “ಅರ್ಧ ವಾರ್ಷಿಕ ಸಭೆ”




ಜುಲೈ 31ರಂದು ಬೆಳಗಾವ ಧರ್ಮಪ್ರಾಂತ್ಯ ಅಭೀವೃದಿ ಸಂಸ್ಥೆ ಧಾರವಾಡದಲ್ಲಿ, ಉಜ್ಜೀವನ ಕಾರ್ಯಕ್ರಮದ ಮೂರನೆ ಹಂತದ ಅರ್ಧವಾರ್ಷಿಕ ಮಾಸಿಕ ಸಭೆಯು ಧಾರವಾಡದ ಸೇವಾಲಯದಲ್ಲಿ ಹಮ್ಮಿಕೊಳ್ಳಲಾಯಿತು.ನಾಲ್ಕು ಧರ್ಮಪ್ರಾಂತ್ಯಗಳ ಉಜ್ಜೀವನ ಯೋಜನೆಯ ಕಾರ್ಯಕ್ರಮದ ಸಂಯೋಜಕರು ತಮ್ಮ ಪ್ರಾಂತ್ಯಗಳ ಆರು ತಿಂಗಳ ಮಾಸಿಕ ವರದಿಯನ್ನು ಮಂಡನೆ ಮಾಡಿದರು.ಮತ್ತು ಸೇವಾ ಸಂಗಮ ಸಂಸ್ಥೆಯ ಉಜ್ಜೀವನ ಕಾರ್ಯಕ್ರಮದ ಸಂಯೋಜಕರಾದ ಶ್ರಿಯುತ ಚಂದ್ರಕಾಂತ ವರದಿ ಮಂಡನೆ ಮಾಡಿದರು.ಸಂಪನ್ಮೂಲ ವ್ಯಕ್ತಿಗಳಾಗಿ ರಾಷ್ಟ್ರಮಟ್ಟದ ಯೋಜನೆಯ ಅಧಿಕಾರಿಗಳಾದ ಶ್ರೀ ರಾಬಟ ಡಿಸೋಜಾ ಅವರ ಉಪಸ್ಥಿತಿಯಲ್ಲಿ, ಆರು ತಿಂಗಳ ಅಭೀವೃದಿ ಕಾರ್ಯಚಟುವಟಿಕೆಗಳನ್ನು ಪಿ ಪಿ ಟಿ ಯ ಮುಂಖಾತರ ವಿಷಯ ಹಂಚಿಕೆ ಮಾಡಿದರು.



ಜುಲೈ 18 ರಂದು ಸೇವಾ ಸಂಗಮ ಸಂಸ್ಥೆಯ ಉಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶೀಮತಿ ಇಂದು ಅವರು ನಂದೂರ ಕೆ ಗ್ರಾಮಕ್ಕೆ ಭೇಟಿ ನೀಡಿ, ಸಮುದಾಯದಾ ರೈತರಿಗೆ ಭೇಟಿ ಮಾಡಿ ಗುಂಪು ಚರ್ಚೆಯನ್ನು ಆಯೋಜಿಸಿದರು. ಗ್ರಾಮದ ಅಗತ್ಯತೆಗೆ ಬೇಕಾದ ಸ್ಥಳಿಯ ಸಂಪನ್ಮೂಲ ಯೋಜನೆಗಳನ್ನು ಗುರುತಿಸಿಕೊಂಡು. ಗ್ರಾಮದಲ್ಲಿರುವ ಸಮಸ್ಯೆಗಳನ್ನು ಗುರುತಿಸಿ, ಆ ಸಮಸ್ಯೆಗಳಿಗೆ ಪರಿಹಾರ ಪಡೆಯುವ ನಿಟ್ಟಿನಲ್ಲಿ ಗ್ರಾಮ ಪಂಚಾಯತಗೆ ಭೇಟಿ ನೀಡಿ ಅರ್ಜಿ ಸಲ್ಲಿಸುವಂತೆ ಮುಂಖಡರಿಗೆ ತಿಳಿಸಲಾ ಯಿತು.

## “ಸಾವಯವ ಕೈತೋಟ ಮಾಡಲು ಮಾಹಿತಿ”



ಸೇವಾ ಸಂಗಮ ಸಂಸ್ಥೆಯ ಉಜ್ಜೀವನ ಕಾರ್ಯಕ್ರಮದ ಯೋಜನೆಯ ಅಡಿಯಲಿ ಜುಲೈ 8ರಂದು ಉಜ್ಜೀವನ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ನಂದಿನಿ ಅವರು, ಕಲಬುರಗಿ ತಾಲೂಕಿನ ಧರ್ಮಪುರ ಗ್ರಾಮಕ್ಕೆ ಭೇಟಿಮಾಡಿ ತೋಟಗಾರಿಕೆ ಇಲಾಖೆಯಿಂದ ಸೀಗುವ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು, ಹಸಿರು ಮೇಣಸಿನಕಾಯಿ ಬೆಳೆಯುತ್ತಿರುವ ರೈತರಿಗೆ ಅರ್ಧ ಏಕರೆಗೆ 7000 ರೂಪಾಯಿ ಧನ ಸಹಾಯದ ಕುರಿತು ಮಾಹಿತಿ ನೀಡಿ, 6 ರೈತರಿಗೆ ಹಸಿರು ಮೇಣಸಿನಕಾಯಿ ವಿಮೇ/ ಇನ್ಸೂರೆನ್ಸ ಮಾಡಿಸಲಾಯಿತ್ತು.

ಜುಲೈ 23ರಂದು ಸೇವಾ ಸಂಗಮ ಸಂಸ್ಥೆಯ ಉಜ್ಜೀವನ ಕಾರ್ಯಕ್ರಮದ ಯೋಜನೆಯ ಅಡಿಯಲ್ಲಿ ಕಾರ್ಯಕರ್ತೆಯಾದ ಶ್ರೀಮತಿ ನಂದಿನಿ ಕಲಬುರಗಿ ತಾಲೂಕಿನ ಸೀತನೂರು, ಧರ್ಮಾಪುರ, ಉದನೂರ, ನಾಗನಹಳ್ಳಿ ಗ್ರಾಮಕ್ಕೆ ಭೇಟಿಮಾಡಿ 30 ಜನರಿಗೆ ಮನೆಯ ಅಂಗಳದಲ್ಲಿ ರಾಸಾಯನಿಕ ರಸ ಗೋಬ್ಬರಗಳನ್ನು ಬಳಸದೆ, ಸಾವಯವ ಕೈತೋಟ ಮಾಡಲು ಮಾಹಿತಿಯನ್ನು ನೀಡಿ, 20 ಜನರಿಗೆ ತರಕಾರಿ ಬೀಜಗಳನ್ನು ವಿತರಿಸಲಾಯಿತು. ತದನಂತರ ಉಜ್ಜೀವನ ಕಾರ್ಯಕ್ರಮದ ಸಂಯೋಜಕರಾದ ಶ್ರೀಯುತ ಚಂದ್ರಕಾತ ರವರು ಪ್ರಧಾನ ಮಂತ್ರಿ ಭೀಮ ಸುರಕ್ಷ ಯೋಜನೆ ಕುರಿತು ವಿವರಿಸಿದ್ದರು. ಜನರಿಗೆ ಪ್ರಧಾನ ಮಂತ್ರಿ ಭೀಮ ಸುರಕ್ಷ ಯೋಜನೆ 20 ರೂಪಾಯಿ ಜೀವ ವಿಮೆ ಕುರಿತು ಮಾಹಿತಿ ನೀಡಿ, 4 ಜನರಿಗೆ ಜೀವ ವಿಮೆ ಮಾಡಿಸಲಾಯಿತು.





## “ಕೃಷಿ ಇಲಾಖೆ ಯಿಂದ ರೈತರಿಗೆ ಹೊಸ ಸುದ್ದಿ”

GI3A Geographical Indications of Goods Registration



ಕೃಷಿ ಬೇಸಾಯ ಆಹಾರ ಮತ್ತು ಸಾಗುವಳಿ, ಕೃಷಿ ಅಧಿಕಾರಿಗಳಾದ ಶ್ರೀಮತಿ ಕವಿತ ಅವರಿಗೆ ಭೇಟಿ ಮಾಡಿ.ನಮ್ಮ ಸೇವಾ ಸಂಗಮ ಸಂಸ್ಥೆ ಮಾಡುತ್ತಿರುವ ಸಾಮಾಜಿಕ ಸೇವೆಗಳ ಕುರಿತು ಪರಿಚಯ ನೀಡಲಾಯಿತು.ತೊಗರಿ ಬೆಳೆ ಬೆಳೆಯುವ ಪ್ರತಿಯೊಬ್ಬ ರೈತರು ಕಡ್ಡಾಯವಾಗಿ ಬೆಳೆ ವಿಮೆ ನೋಂದಣಿ ಮಾಡಿಸುವ ಮಾಹಿತಿ ಪಡೆದುಕೊಳ್ಳಲಾಯಿತು. ಮಹಾತ್ಮಾ ಗಾಂದೀ ರಾಷ್ಟೀಯ ಉದ್ಯೋಗ ಖಾತರಿ ಯೋಜನೆ ಎರಡು ವರ್ಷಗಳ ನಂತರ ಸಿಹಿ ಸುದಿ ಮಹಿಳ ರೈತರಿಗೆ ಉದ್ಯೋಗ ಖಾತರಿ ಕಾರ್ಡ ಪಡೆಯಲಾಯಿತು. 2023 ಸಾಲೀನ ನಲ್ಲಿ 45 ಜನರಿಗೆ ಮಹಾತ್ಮಾ ಗಾಂದೀ ರಾಷ್ಟೀಯ ಉದ್ಯೋಗ ಖಾತರಿ ಕಾರ್ಡಗಳ ಬಗ್ಗೆ ಮಾಹಿತಿ ನೀಡಿ, 40 ಅರ್ಜಿಗಳು ಗ್ರಾಮ ಪಂಚಾಯತಗೆ ಸಲ್ಲಿಸಲಾಯಿತು. 38 ಜನರಿಗೆ ಕಾರ್ಡುಗಳನ್ನು ಮಾಡಿಸಿ, ಜುಲೈ 30 ರಂದು ಪಡೆಯಲಾಯಿತು.



## “ಸ್ಪರ್ಶ ಕ್ಯಾನ್ಸರ್ ಕಾರ್ಯಕ್ರಮ”

### “ತಂಬಾಕು ನಿಷೇಧದ ಕುರಿತು ಜಾಗೃತಿ ಕಾರ್ಯಕ್ರಮ”



ಜುಲೈ 26 ರಂದು ಸೇವಾ ಸಂಗಮ ಸಂಸ್ಥೆ, ಇಂಡಿಯನ್ ಕ್ಯಾನ್ಸರ್ ಸೊಸೈಟಿ ಹಾಗೂ ಆಲ್ ಬ್ರದರ್ ದಂತ ಕಾಲೇಜು ಮತ್ತು ಆಸ್ಪತ್ರೆ ಸಂಯುಕ್ತ ಆಶ್ರಯದಲ್ಲಿ ಸೆಂಟ್ ಮೇರಿ ಶಾಲೆ ಕೊಟ್ನೂರ್ ಡಿ. ಕಲಬುರಗಿಯಲ್ಲಿ ಮಕ್ಕಳಿಗೆ ತಂಬಾಕು ನಿಷೇಧದ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.ಕಾರ್ಯಕ್ರಮದಲ್ಲಿ ಡಾ.ಗುರುರಾಜ್ ಕುಲಕರ್ಣಿ ಮಾತನಾಡಿ ತಂಬಾಕು ಪದಾರ್ಥಗಳ ಚಟಗಳಿಂದ ದೂರವಿರಬೇಕೆಂದು ತಿಳಿಸಿದರು, ಈ ಸಂದರ್ಭದಲ್ಲಿ ಸೇವಾ ಸಂಗಮ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್ ಮಾತನಾಡುತ್ತಾ, ಮಕ್ಕಳು ರಾಷ್ಟದ ಸಂಪತ್ತು ಹಾಗೂ ಭವಿಷ್ಯದ ನಾಯಕರಾಗುವವರು, ಉತ್ತಮ ಆರೋಗ್ಯ, ಉತ್ತಮ ಆಲೋಚನೆಗಳುಳ್ಳ ಬಲಿಷ್ಠ ನಾಯಕರಾಗಬೇಕೆಂದು ಮಕ್ಕಳಿಗೆ ಸಲಹೆ ನೀಡಿದರು.ಕಾರ್ಯಕ್ರಮದಲ್ಲಿ 280 ಮಕ್ಕಳು, ಶಾಲೆಯ ಶಿಕ್ಷಕರು, ಹಾಗೂ ಸೇವಾ ಸಂಗಮ ಸಂಸ್ಥೆಯ ಕಾರ್ಯಕರ್ತರು ಭಾಗವಹಿಸಿದ್ದರು.



### “ಆರೋಗ್ಯವೇ ಭಾಗ್ಯ”

ಕಲಬುರಗಿ ತಾಲ್ಲೂಕಿನ ಫರಹತಬಾದ ಗ್ರಾಮದ ಮೌಲಾನ ಆಜಾದ ಶಾಲೆಯಲ್ಲಿ ಜುಲೈ 23 ರಂದು ಸೇವಾ ಸಂಗಮ ಸಂಸ್ಥೆಯವತಿಯಿಂದ ಕ್ಯಾನ್ಸರ್ ಕುರಿತು ಮಕ್ಕಳಿಗೆ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.ಕಾರ್ಯಕ್ರಮವನ್ನು ಉದ್ದೇಶಿಸಿ ರಾಜಕುಮಾರ್ ಮಾತನಾಡಿದರು.ಆರೊಗ್ಯವೇ ಭಾಗ್ಯ, ನಮ್ಮ ಆರೋಗ್ಯದ ಕುರಿತು ಮಕ್ಕಳು ಜಾಗ್ರುರತಾಗಬೇಕು.ತಾವು ಬೆಳಗಾದರೆ ತಿನ್ನುವ ತಿಂಡಿ, ತಿನ್ನುಸುಗಳಿಂದ ಆರೋಗ್ಯದ ಮೇಲಾಗುವ ಪರಿಣಾಮದ ಕುರಿತು ಯೋಚಿಸಬೇಕು.ನಮ್ಮ ಆಹಾರ ಸೇವನೆ ಪೌಷ್ಟಿಕ ಆಹಾರದಿಂದ ಕೂಡಿರಬೇಕು, ನಾವು ವಾಸಿಸುವ ಪರಿಸರದಿಂದ ಕೂಡ ನಮ್ಮ ಆರೋಗ್ಯದ ಮೇಲೆ ಅನೇಕ ರೀತಿಯಲ್ಲಿ ದುಷ್ಪರಿಣಾಮ ಬೀರುತ್ತದೆ.ಆದರಿಂದ ನಮ್ಮ-ನಿಮ್ಮೇಲ್ಲ ಕರ್ತವ್ಯ ಆರೋಗ್ಯಯುತವಾದ ಪರಿಸರವನ್ನು ನಿರ್ಮಾಣ ಮಾಡುವುದಾಗಿದೆ.ಇಲ್ಲವಾದಲ್ಲಿ ಕ್ಯಾನ್ಸರ್ ನಂತಹ ರೋಗಕ್ಕೆ ಬಲಿಯಾಗುವ ಸ್ಥಿತಿಗಳು ಉಂಟಾಗುತ್ತವೆ ಎಂದು ಹೇಳಿದರು.ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಕರು ಹಾಗು ಮಕ್ಕಳು ಸೇರಿ 50 ಜನರು ಭಾಗವಹಿಸಿದರು.



## "ದೋಣಿ  ಬದಲಿಸುವ ಅವಶ್ಯಕತೆಯಿಲ್ಲ, ಅದರ ದಿಕ್ಕನ್ನು ಬದಲಿಸಿದರೆ ಸಾಕು"



ಕಲಬುರಗಿ ನಗರದ ಮದರ್ ತೆರೇಸಾ ಸಭಾಂಗಣದಲ್ಲಿ  ಸೇವಾ ಸಂಗಮ ಸಂಸ್ಥೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಜುಲೈ 21ರಂದು ಅಂಗನವಾಡಿ ಕಾರ್ಯಕರ್ತೆಯರಿಗೆ ಕ್ಯಾನ್ಸರ್ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಶ್ರೀ ರಾಜಕುಮಾರ ಮಾತನಾಡಿ  ಕ್ಯಾನ್ಸರ್ ಎಂದರೆ ಮನುಷ್ಯನ ದೇಹದ ಸಕಲ ಅಂಗಾಂಗ ಗಳಲ್ಲಿ ಸೂಕ್ಷ್ಮಾತಿ ಸೂಕ್ಷ್ಮ ಕೋಟ್ಯಾಂತರ ಜೀವಕೋಶಗಳಿವೆ, ಈ ಜೀವಕೋಶಗಳಿಗೆ  ಹೊರಗಿನ ಉತ್ತೇಜನ, ಪ್ರಚೋದನೆ ದೊರೆತು ಅವುಗಳು ಅಸಾಮಾನ್ಯ ರೀತಿಯಲ್ಲಿ ನಿರುಪಯುಕ್ತ ಜೀವಕೋಶಗಳಾಗಿ ಪರಿವರ್ತಿತಗೊಳ್ಳುವುದೇ ಕ್ಯಾನ್ಸರ್ ಕಾಯಿಲೆಯ ಮೂಲವಾಗಿದೆ. ಕ್ಯಾನ್ಸರ್ ಬರಲು ಕಾರಣಗಳು, ಕ್ಯಾನ್ಸರ್ ತಡೆಗಡುವ ವಿಧಾನಗಳು, ಕ್ಯಾನ್ಸರ್ ವಿಧಗಳ ಕುರಿತು ಸವಿಸ್ತಾರವಾಗಿ ಮಾಹಿತಿಯನ್ನು ನೀಡಿದರು. ಕ್ಯಾನ್ಸರ್  ನಿಂದ ಬದುಕುಳಿಬೇಕಾದರೆ ಎರಡು ನಿಯಮಗಳನ್ನು ಅನುಸರಿಸಿದರೆ ಉತ್ತಮ. ಮೊದಲನೆ ನಿಯಮ ಕ್ಯಾನ್ಸರ್ ಮೊದಲ ಹಂತದಲ್ಲಿ ಪತ್ತೆ ಹಚ್ಚಿದರೆ ಅದನ್ನು ಗುಣಪಡಿಸಬಹುದಾಗಿದೆ ಇದಕ್ಕೆ ನಾವು ಅನುಸರಿಸಬೇಕಾದ ನಿಯಮ ವರ್ಷದಲ್ಲಿ ಎರಡು ಬಾರಿಯಾದರು ಕ್ಯಾನ್ಸರ್ ತಪಾಸಣೆ ಕಡ್ಡಾಯವಾಗಿ ಮಾಡಿಕೊಳ್ಳುವುದು, ಎರಡನೆಯ ನಿಯಮ ನಮ್ಮ ಆಧುನಿಕ ಜೀವನದಲ್ಲಿ ನಿವು ಸೇವಿಸುವ ಆಹಾರ ಬದ್ದತೆಯನ್ನು ಅನುಸರಿಸುವುದು, ಪೌಷ್ಠಿಕ ಆಹಾರ, ಹಸಿರು ತರಕಾರಿ, ಹಣುಗಳ ಸೇವನೆಯಿಂದ ನಮನ್ನು ನಾವು ಈ ಕ್ಯಾನ್ಸರ್ ಮಹಾಮಾರಿಯಿಂದ ಕಾಪಾಡಿಕೊಳ್ಳಬಹುದಾಗಿದೆ. 'ದೋಣಿ  ಬದಲಿಸುವ ಅವಶ್ಯಕತೆಯಿಲ್ಲ, ಅದರ ದಿಕ್ಕನ್ನು ಬದಲಿಸಿದರೆ ಸಾಕು' ಅಂದರೆ ನಮ್ಮ ಜೀವನ ಶೈಲಿಯಲ್ಲಿ ಚಿಕ್ಕ-ಚಿಕ್ಕ ಬದಲಾವಣೆ ಮಾಡಿಕೊಂಡರೆ ಸಾಕು ಎಂದು ಹೇಳಿದರು. ಕಾರ್ಯಕ್ರಮದಲ್ಲಿ 64 ಅಂಗನವಾಡಿ ಕಾರ್ಯಕರ್ತೆಯರು  ಭಾಗವಹಿಸುವುದರೊಂದಿಗೆ ಕ್ಯಾನ್ಸರ್ ಕುರಿತು ಜಾಗೃತಿ ಹೊಂದಿದರು.



## "ತಂಬಾಕು ಮುಕ್ತ ಶಾಲೆಯ ಸಂಕಲ್ಪ"

ಕಲಬುರಗಿ ತಾಲ್ಲೂಕಿನಲ್ ಹಾಗರಗುಂಡಗಿ ಗ್ರಾಮದ ಸರಕಾರಿ ಪ್ರೌಢ ಶಾಲೆಯಲ್ಲಿ ಜುಲೈ 22 ರಂದು ಸೇವಾ ಸಂಗಮ ಸಂಸ್ಥೆಯ ವತಿಯಿಂದ ಕ್ಯಾನ್ಸರ್ ಕುರಿತು ಮಕ್ಕಳಿಗೆ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.ಕಾರ್ಯಕ್ರಮದಲ್ಲಿ ಸಂಸ್ಥೆಯ ಕಾರ್ಯಕರ್ತರಾದ ರಾಜಕುಮಾರ ಮಾತನಾಡಿದರು.ಇಂದಿನ ಮಕ್ಕಳು ಇಂದಿನ ಪ್ರಜೇಗಳಂತೆ ತಿಳಿದು ನಾವು ಭವಿಷ್ಯವನ್ನ ನಿರ್ಮಿಸಬೆಕಾಗಿದೆ.ಮಕ್ಕಳು ತಮ್ಮ ಬಾಲ್ಯದಿಂದ ಪ್ರೌಢವಸ್ಥೆಗೆ ಬರವಷ್ಟರಲಿ ಧೂಮಪಾನ, ಮಧ್ಯಪಾನ, ತಂಬಾಕಿನಿಂದ ತಯಾರಿಸಲ್ಪಟ್ಟ ವಸ್ತುಗಳ ಸೇವನಗೆ ದಾಸರಾಗುತ್ತಿದ್ದಾರೆ.ಇದರಿಂದ ಮಕ್ಕಳು ಅತ್ಯಂತ ಚಿಕ್ಕ ವಯಸ್ಸಿಗೆ ಕ್ಯಾನ್ಸರ್ ನಂತಹ ರೋಗಕ್ಕೆ ತುತ್ತಾಗುತ್ತಿದ್ದಾರೆ.ತಂಬಾಕು ಸೇವನೆ ಮಾಡುವವರಲ್ಲಿ ಶೇಕಡ 14 ರಷ್ಟು ಶಾಲೆಗೆ ಹೊಗುವ ಮಕ್ಕಳಿದ್ದಾರೆ. ಹೊಗೆಸೋಪ್ಪು ಬೆಳೆ ವಿಶ್ವದಾದ್ಯಂತ ಅತಿಯಾಗಿ ನಶೆಗಾಗಿ ಬಳಕೆಯಾಗುತ್ತಿದ್ದು ಪ್ರತಿವರ್ಷ ಸುಮಾರು 60 ಲಕ್ಷ ಜನರನ್ನು ಬಲಿತೆಗೆದುಕೊಳ್ಳುತ್ತಿದೆ. ಭಾರತದಲ್ಲಿ ಪ್ರತಿವರ್ಷ 10 ಲಕ್ಷ ಜನರು ತಂಬಾಕು ಸೇವನೆಯಿಂದ ಬರುವ ಕಾಯಿಲೆಗಳಿಂದ ಸಾವನ್ನಪ್ಪುತ್ತಿದ್ದಾರೆ.  ಸುಮಾರ 62 ಸಾವಿರ ಜನರು ತಂಬಾಕು ಸೇವನೆಯಿಂದ ಬರುವ ಬಾಯಿ ಕ್ಯಾನ್ಸರ್, ಗಂಟಲು ಮತ್ತು ಅನ್ನನಾಳದ ಕ್ಯಾನ್ಸರಗೆ ಬಲಿಯಾಗುತ್ತಿದ್ದಾರೆ. ಮಕ್ಕಳು ಇಂತಹ ದುಶ್ಚಟಗಳಿಂದ  ದೂರವಿದ್ದು ತಮ್ಮ ಉತ್ತಮ ಹಾಗೂ ಆರೋಗ್ಯಕರವಾದ ಭವಿಷ್ಯದ ಕಡೆಗೆ ಗಮನಹರಿಸಬೇಕು. ಈ ದಿನ ಎಲ್ಲಾ ಮಕ್ಕಳು ತಂಬಾಕು ಮುಕ್ತ ಶಾಲೆಯನ್ನಾಗಿ ಮಾಡು ಸಂಕಲ್ಪ ಮಾಡಬೇಕೆಂದು ಹೇಳಿದರು. ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳು ಹಾಗೂ ಶಾಲಾ ಶಿಕ್ಷಕರು ಸೇರಿ ಒಟ್ಟು 80 ಜನರು ಭಾಗವಹಿಸಿದರು.





# ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ

## "ಪ್ರತಿಯೊಂದು ಮಗುವಿಗೂ ಘನತೆಯಿಂದ ಬದುಕುವ ಹಕ್ಕಿದೆ"



ಕಲಬುರಗಿ ತಾಲ್ಲೂಕಿ ಕವಲ್ಗಾ ಬಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜುಲೈ 9ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜಿಂ ಪ್ರೇಮಜಿ ಫೌಂಢೇಶನ, ಕಲಬುರಗಿ ಸಂಯುಕ್ತ ಆಶ್ರಯದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದ ಕುರಿತು ಹಾಗೂ ಮಕ್ಕಳ ಹಕ್ಕುಗಳ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯತು. ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ರಾಜಕುಮಾರ್, ಸಮಾಜದಲ್ಲಿರುವ ಪ್ರತಿಯೊಂದು ಮಗುವಿಗೂ ಸಮಾನತೆ, ಸ್ವಾತಂತ್ರ್ಯ, ಗೌರವಯುತವಾದ, ಘನ್ನತೆಯುತವಾದ ಬದುಕನ್ನು ಸಾಗಿಸುವ ಹಕ್ಕಿದೆ.ಅನೇಕ ಮಕ್ಕಳು ಬೆಳವಣ ಗೆಯಲ್ಲಿ ಕುಂಠಿತಗೊಳ್ಳುವುದರಿಂದ ವಿಭಿನ ರೀತಿಯಾ ನ್ಯೂನತೆಗೆ ಒಳಗಾಗುತ್ತಾರೆ.ಇದರಿಂದ ಅವರು ಭವಿಷದಲ್ಲಿ ಅಂಗವೈಕಲ್ಯತೆಯಿದ ಕೂಡಿದ ಬದುಕನ್ನು ಸಾಗಿಸಬೇಕಾಗುತ್ತದೆ.ಸೇವಾಸಂಗಮ ಸಂಸ್ಥೆ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳನ್ನು ಶೀಘ್ರವಾಗಿ ಗುರುತ್ತಿಸಿ, ಆ ಮಕ್ಕಳಲ್ಲಿರುವ ನ್ಯೂನತೆಯನ್ನು ಪತ್ತೆ ಹಚ್ಚಲು ಮಕ್ಕಳ ಬೆಳವಣಿಗೆಯ ಹಂತಗಳನ್ನು ವಿಶ್ಲೇಷಣೆ ಮಾಡುವ ಮೂಲಕ ನ್ಯೂನತೆಗೆ ಅನುಗುಣವಾದ ಚಟುವಟಿಕೆ ದೊರೆಯುವಂತಹ ಪರಿಸವನ್ನು ನಿರ್ಮಾಣ ಮಾಡುವ ಕಾರ್ಯವನ್ನು ಮಾಡುತ್ತಿದೆ ಎಂದು ಹೇಳಿದರು.ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯಗುರುಗಳು, ಶಾಲಾ ಶಿಕ್ಷಕರು ಹಾಗೂ 80 ಜನ ಮಕ್ಕಳು ಭಾಗವಹಿಸಿದರು.



## "ಮಕ್ಕಳ ಬೆಳವಣಿಗೆಯ ಹಂತದ ಅರಿವು ತಾಯಿಗೆ ಅಗತ್ಯ"



ಕಲಬುರಗಿ ತಾಲ್ಲೂಕಿನ ಫರಹತಬಾದ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಜುಲೈ 9 ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜಿಮ್ ಪ್ರೇಮಜಿ ಫೌಂಢೇಶನ, ಸಂಯುಕ್ತ ಆಶ್ರಯದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯತು. ಕಾರ್ಯಕ್ರಮದಲ್ಲಿ ಕಾರ್ಯಕರ್ತರಾದ ರಾಜಕುಮಾರ ದೇವರಮನಿ ಮಾತನಾಡಿದರು. 0–6 ವರ್ಷದವರೆಗೆ ತಮ್ಮ ಮಕ್ಕಳಲ್ಲಿ ಅನೇಕ ರೀತಿಯ ಬದಲಾವಣೆಗಳು ಕಾಣಬಹುದಾಗಿದೆ.ಈ ಹಂತದಲ್ಲಿ ಮಕ್ಕಳು ಬೆಳವಣಿಗೆ ಯಲ್ಲಿ ಕುಂಠಿತಕ್ಕೆ ಒಳಗಾಗುವ ಸಾಧ್ಯತೆ ಇರುತ್ತದೆ.ಆದ್ದರಿಂದ ಪ್ರತಿಯೊಬ್ಬ ತಾಯಿ ತನ್ನ ಮಗುವಿನ ಬೆಳವಣಿಗೆ ಯ ಕುರಿತು ಗಮನ ಹರಿಸುವುದ ಅಗತ್ಯವಾಗಿರುತ್ತದೆ. ಬೆಳವಣಿಗೆಯಲ್ಲಿ ಕುಂಠಿತ ಮಕ್ಕಳ ಅಭಿವೃದ್ಧಿಗಾಗಿ ಸೇವಾ ಸಂಗಮ ಸಂಸ್ಥೆಯ ಕಾರ್ಯನಿರ್ವಹಿಸುತ್ತಿದ್ದು ಅಂತಹ ಮಕ್ಕಳು ಕಂಡು ಬಂದಲ್ಲಿ ಸಂಸ್ಥೆಯ ಗಮನಕ್ಕೆ ತರಬೇಕೆಂದು ತಿಳಿಸಿದರು. ಕಾರ್ಯಕ್ರಮದಲ್ಲಿ 20 ಜನ ತಾಯಂದಿರು ಭಾಗವಹಿಸಿದರು.



## "ಮಕ್ಕಳ ಬೆಳವಣಗೆಯ ಹಂತಗಳು"



ಕಲಬುರಗಿ ತಾಲ್ಲೂಕಿನ ನಂದೂರ ಬಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜುಲೈ 14ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜಿಂ ಪ್ರೇಮಜಿ ಫೌಂಢೇಶನ ಸಂಯುಕ್ತ ಆಶ್ರಯದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯತು. ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಕಾರ್ಯಕರ್ತರು ರಾಜಕುಮಾರ ಅವರು ಮಕ್ಕಳ ಬೆಳವಣ ಯನ್ನು ಐದು ಹಂತಗಳಲ್ಲಿ ನಾವು ನೋಡಬಹುದಾಗಿದೆ, ಅದರಲ್ಲಿ ಪ್ರಥಮವಾಗಿ ದೈಹಿಕ ಬೆಳವಣಗೆ, ಮಾನಸಿಕ ಬೆಳವಣಗೆ, ಭೌತಿಕ ಬೆಳವಣಗೆ, ಭಾಷ ಬೆಳವಣಗೆ ಮತ್ತು ಸಾಮಾಜಿಕ ಬೆಳವಣಗೆ ಈ ಹಂತಗಳು ವಯಸ್ಸಿಗೆ ಅನುಗುಣವಾಗಿ ಅಭಿವೃದ್ಧಿಯಾಗುತ್ತವೆ. ವಯಸ್ಸಿಗೆ ಅನುಗುಣವಾಗಿ ಬೆಳವಣ ಗೆಯಾಗದೇ ಇದ್ದಲಿ ಅದನ್ನು ನಾವು ಬೆಳವಣಗೆಯಲ್ಲಿ ಕುಂಠಿತವೆಂದು ಹೇಳುತ್ತೇವೆ. ಇಂತ ಮಕ್ಕಳನ್ನು ಶೀಘ್ರವಾಗಿ ಗುರುತಿಸುವ ಮೂಲಕ ಉತ್ತೇಜಕ ಚಟುವಟಿಯನ್ನು ಒದಗಿಸಿದಲ್ಲಿ ಆ ಕುಂಠಿತ ಬೆಳವಣ ಗೆಯನ್ನು ಗುಣಪಡಿಸಬಹುದಾಗಿದೆ ಎಂದು ಹೇಳಿದರು.ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳು ಮತ್ತು ಸಹ ಶಿಕ್ಷಕರು ಸೇರಿ ಒಟ್ಟ 80 ಜನರು ಭಾಗವಹಿಸಿದರು.



## “ಮನೆಯೇ ಮಂತ್ರಾಲಯ ಮನಸ್ಸೆ ದೇವಾಲಯ”



ಕಲಬುರಗಿ ತಾಲ್ಲೂಕಿನ ಫರಹತಬಾದ ಗ್ರಾಮದ ಚೇತನ ಉಪ – ಕೇಂದ್ರ ದಲ್ಲಿ ಜುಲೈ 12ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜಿಂ ಪ್ರೇಮಜಿ ಫೌಂಡೇಶನ ಸಂಯುಕ್ತ ಆಶ್ರಯದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದಡಿ, ಪಾಲಕರಿಗೆ ಸಾಮರ್ಥ್ಯ ನಿರ್ಮಾಣ ಕುರಿತು ಒಂದು ದಿನದ ತರಬೇತಿ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಶ್ರೀ ಸದಾನಂದ ಅವರು ಪಾಲಕರಿಗೆ ತಮ್ಮ ಮಕ್ಕಳ ದೈಹಿಕ, ಮಾನಸಿಕ, ಭೌತಿಕ, ಸಾಮಾಜಿಕ ಮತ್ತು ಭಾಷ ಕಲಿಕೆಯನ್ನು ಉತ್ತಮಗೊಳಿಸಲು ಮನೆಯಲ್ಲಿ ಲಭ್ಯವಿರುವ ಸಾಮಗ್ರಿಗಳನ್ನು ವಿಭಿನವಾಗಿ ಬಳಸಿಕೊಳುವ ವಿಧಾನಗಳ ಕುರಿತು ಮಾಹಿತಿಯನ್ನು ನಿಡಿದರು. “ಮನೆಯೆ ಮಂತ್ರಾಲಯ ಮನಸ್ಸೆ ದೇವಾಲಯ” ನಿಮ್ಮ ಮನೆಯಲ್ಲಿರುವ ಸಾಮಾಗ್ರಿಗಳನ್ನೆ ಮಂತ್ರವಾಗಿ ಉಪಯೋಗಿಸಿಕೊಂಡು, ತಮ್ಮ ಮಕ್ಕಳಿಗೆ ನೀಡುವ ಚಟುವಟಿಕೆಯನ್ನೇ ದೇವಾಲಯೆಂದು ಪೂಜಿಸಿ ಪ್ರತಿದಿನ ಚಟುವಟಿಕಯನ್ನು ಮಾಡಿಸಿದರೆ ಅದರ ಪ್ರತಿಫಲಾವಾಗಿ ಮಕ್ಕಳಲ್ಲಿ ಬದಲಾವಣೆಯನ್ನು ಕಾಣಬಹುದಾಗಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಶ್ರೀಮತಿ ಶಿವಕಾಂತಾ ಅವರು ಮನೆಯ ಸಾಮಾಗ್ರಿಗಳನ್ನು ಬಳಿಸಿಕೊಂಡು ಪಾಲಕರ ಸಮುಖದಲ್ಲಿ ಪ್ರಾಯೋಗಿಕವಾಗಿ ಮಕ್ಕಳಿಗೆ ಚಟುವಟಿಕಯನ್ನು ಮಾಡಿಸಿದರು. ಕಾರ್ಯಕ್ರಮದಲ್ಲಿ ಶ್ರೀಮತಿ ಶ್ವೇತಾ ಕುಲಕರಣಿ ಯೋಜನಾ ವ್ಯವಸ್ಥಾಪಕರು, ಕಾರ್ಯಕರ್ತರಾದ ಶ್ರೀಮತಿ ದಾಕ್ಷಾಯಿಣಿ ಮತ್ತು ಶ್ರೀ ರಾಜಕುಮಾರ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಪಾಲಕರು ಮತ್ತು ಮಕ್ಕಳು ಸೇರಿ ಒಟ್ಟು 30 ಜನರು ಭಾಗವಹಿಸಿದರು.



## “ಮನಸ್ಸಿದರೆ ಮಾರ್ಗ”



ಕಲಬುರಗಿ ತಾಲ್ಲೂಕಿನಲ್ಲಿ ಫರಹತಬಾದ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ತಾಯಂದಿರಿಗೆ ಶಿಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯಡಿ ಬೆಳವಣಗೆಯಲ್ಲಿ ಕುಂಠಿತವಿರುವ ಮಕ್ಕಳ ಕುರಿತು ಜಾಗೃತಿ ಕಾರ್ಯಕ್ರಮವನ್ನು ಸೇವಾ ಸಂಗಮ ಸಂಸ್ಥೆಯವತಿಯಿಂದ ಜುಲೈ 20 ರಂದು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಸೇವಾ ಸಂಗಮ ಸಂಸ್ಥೆಯ ಕಾರ್ಯಕರ್ತರಾದ ರಾಜಕುಮಾರ ಮಾತನಾಡಿ 0–6 ವರ್ಷದ ಒಳಗಿನ ಮಕ್ಕಳಲ್ಲಿ ಬೆಳವಣಗೆಯ ಹಂತಗಳು ಕುಂಠಿತವಾಗುತ್ತದೆ.ಈ ಸಂದರ್ಭದಲ್ಲಿ ಮಕ್ಕಳಿಗೆ ಉತ್ತೇಜಕ ಚಟುವಟಿಕೆಯನ್ನು ನೀಡುವ ಮೂಲಕ ಬೆಳವಣಗೆಯ ಹಂತಗಳನ್ನು ಸದೃಢಗೊಳಿಸಬಹುದು ಎಂದು ಹೇಳಿದರು. ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಶ್ರೀಮತಿ ನಿಂಗಮ್ಮ, ಇಂದು ಉತ್ತಮ ಸಮಾಜ ನಿರ್ಮಾಣಕ್ಕಾಗಿ ಸರಕಾರ ಅನೇಕ ರೀತಿಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಸಿದೆ ಅದನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಕಾರ್ಯದಲ್ಲಿ ಸೇವಾ ಸಂಗಮದಂತಹ ಸಂಘ–ಸಂಸ್ಥೆಗಳ ಪಾತ್ರ ಮಹತ್ವದಾಗಿದೆ. ಸಮಾಜದ ನಿರ್ಮಾಣ ಮತ್ತು ಅವಿನಾಶ ಎರಡು ಸ್ತ್ರೀಯ ಕೈಯಲ್ಲಿದೆ. ಸರಕಾರದ ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ತಾಯಂದಿರ ನಡುವೆ ಸಂಘ–ಸಂಸ್ಥೆಗಳು ಸೇತುವೆಯಾಗಿ ಕಾರ್ಯವನ್ನು ನಿರ್ವಹಿಸುತ್ತವೆ. ಸರಕಾರ ಮತ್ತು ಸಂಘ ಸಂಸ್ಥೆಗಳು ನಿರಂತರವಾಗಿ ತರಬೇತಿಗಳನ್ನು ಆಯೋಜಿಸುವ ಮೂಲಕ ಮಾಹಿತಿಯೆಂಬ ಪೌಷ್ಠಿಕ ಆಹಾರವನ್ನು ನಿಮಗೆ ಉಣಾಬಡಿಸುತ್ತಾರೆ, ಅದನ್ನು ತಾವು ಅಧಿಕವಾಗಿ ಸೇವಿಸುವ ಮೂಲಕ ಅರಗಿಸಿಕೊಂಡು ಅದ್ದರಿಂದ ಸಿಗುವ ಶಕ್ತಿಯನ್ನು ಪಡೆಯುವ ಮೂಲಕ ಬಲಿಷ್ಠರಾಗಬೇಕು.ಅಂದರೆ ಇಂತಹ ಕಾರ್ಯಕ್ರಮಗಳ ಮೂಲಕ ದೊರೆಯುವ ಮಾಹಿತಿಯಿಂದ ಜಾಗೃತಗೊಂಡು ಸಮಾಜದಲ್ಲಿ ಉತ್ತಮ ಸ್ಥಾನಮಾನಕ್ಕೆ ತಲುಪಬಹುದಾಗಿದೆ.ಒಬ್ಬ ಮಹಿಳೆ ಮನಸ್ಸು ಮಾಡಿದರೆ ಸಾಧ್ಯವಾಗದನು ಸಾಧಿಸಿ ತೊರಿಸ ಬಲ್ಲಳು ಎಂಬುವುದನ್ನು ತಾವೆಲ್ಲರು ನಿರೂಪಿಸ ಬೇಕಾಗಿದೆ ಎಂದು ಹೇಳಿದರು.ಕಾರ್ಯಕ್ರಮದಲ್ಲಿ 15 ಜನ ತಾಯಂದಿರು ಭಾಗವಹಿಸಿ ಮಾಹಿತಿಯನ್ನು ಪಡೆದುಕೊಂಡರು.

# “ಅಂಗನವಾಡಿ ಕಾರ್ಯಕರ್ತೆಯರಿಗೆ ತರಬೇತಿ ಶಿಬಿರ”



ಕಲಬುರಗಿ ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಫೌಂಡೇಶನ ಸಂಯುಕ್ತ ಆಶ್ರಯದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕುರಿತಾದ ಒಂದು ದಿನದ ತರಬೇತಿ ಕಾರ್ಯಗಾರ ಜುಲೈ 31ರಂದು ಮದರ್ ಥೇರಸಾ ಸಂಭಾಗಣದಲ್ಲಿ ಹಮ್ಮಿಕೊಳ್ಳಲಾಯಿತು.ಕಲಬುರಗಿ ನಗರದ ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆಯ ಯೋಜನಾಧಿಕಾರಿಗಳಾದ ಶ್ರೀ ಭೀಮರಾವ ಕಣ್ಣೂರ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.ಮನೆಯೇ ಮೊದಲ ಪಾಠಶಾಲೆ ತಾಯಿಯೇ ಮೊದಲ ಗುರು ಎಂದು ಹೇಳುವ ಮೂಲಕ ಮಹಿಳೆಯರು ಮಕ್ಕಳ ಸಂರಕ್ಷಣೆ ಮಾಡುವುದರಲ್ಲಿ ಮೇಲುಗೈ ಹೊಂದಿದ್ದಾರೆ.ಅದರಲ್ಲಿಯೇ ನಮ್ಮ ಇಲಾಖೆಯ ಅಂಗನವಾಡಿ ಕಾರ್ಯಕರ್ತರು, ಆಶಾ ಕಾರ್ಯಕರ್ತರು, ಪಿ.ಎಚ್.ಸಿ.ಓ ಅವರು ತುಂಬಾ ಶ್ರಮವಹಿಸಿ ಕಾರ್ಯನಿರ್ವಹಿಸುತ್ತಿದ್ದಾರೆ.ನಮ್ಮ ಇಲಾಖೆಯ ಕಾರ್ಯಕರ್ತರಿಗೆ ಬೆಳವಣ ಗೆಯಲ್ಲಿ ಕುಂಠಿತವಿರು ಮಕ್ಕಳ ಬಗ್ಗೆ ತಿಳಿದುಕೋಳ್ಳಲು ಒಂದ ದಿನದ ತರಬೇತಿಯನ್ನು ಆಯೋಜಿಸಿಲಾಗಿದೆ ಎಂದರು. ಸೆಂಟ್ ಮೇರಿ ಚರ್ಚನ ಧರ್ಮಗುರುಗಳಾದ ಪಾಧರ್ ಪ್ರವೀಣ್ ಬೆಳಿಯುವ ಸಿರಿ ಮೊಳಕೆಯಲ್ಲಿರುವ ಹಾಗೆ ಪ್ರತಿಯೊಂದು ಮಗುವಿನ ಸರ್ವೋತೋಮುಖ ಬೆಳವಣ ಗೆಯಲ್ಲಿ ಅಂಗನವಾಡಿ ಕೇಂದ್ರದಲ್ಲಿ ಆಗುವುದು ಹಾಗೂ ಬೆಳವಣ ಗೆಯಲ್ಲಿ ಕುಂಠಿತವಿರುವ ಮಕ್ಕಳ ನ್ಯೂನ್ಯತೆಯ ತೀವ್ರತೆಯನ್ನು ಕಡಿಮೆ ಮಾಡಲು ಚೇತನ ಕೇಂದ್ರ ಸಹಾಯವಾಗಿದೆ ಎಂದು ಹೇಳಿದರು. ಸೇವಾ ಸಂಗಮ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್‌ರವರು ಮಾತನಾಡುತ್ತಾ ಸಮಾಜದಿಂದ ಅಂಚಿಗೆ ತಳ್ಳಲಪಟ್ಟ ಮಹಿಳೆಯರು ಹಾಗೂ ಮಕ್ಕಳನ್ನು ಮುಖ್ಯವಾಹಿನಿಗೆ ತರುವಂತಹ ಉದ್ದೇಶದಿಂದ ನಾವು ಬೆಳವಣ ಗೆಯಲ್ಲಿ ಕುಂಠಿತವಿರು ಮಕ್ಕಳ ಕುರಿತು ಕಳೆದ 6 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದೆ. ಬೆಳವಣ ಗೆಯಲ್ಲಿ ಕುಂಠಿತವಿರುವ ಮಕ್ಕಳು ಶಾಲೆಗೆ ಹೋಗುತ್ತಿರಲಿಲ್ಲ, ನಮ್ಮ ಸಂಸ್ಥೆಯ ಕಾರ್ಯದಿಂದ ಬದಲಾವಣೆ ಹೊಂದಿದ ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆ.ಅದರಲ್ಲಿ ಅಂಗನವಾಡಿ ಕಾರ್ಯಕರ್ತರು, ಆಶಾ ಕಾರ್ಯಕರ್ತರು, ಪಿ.ಎಚ್.ಸಿ.ಓ ಅವರ ಸಹಕಾರ ನಮಗೆ ತುಂಬಾ ಮುಖ್ಯವಾಗಿದೆ ಎಂದು ತಿಳಿಸಿದರು.ಮಕ್ಕಳಿಗೆ ಶೀಘ್ರವಾಗಿ ಪತ್ತೆ ಹಚ್ಚುವ ಮೂಲಕ ಆರಂಭಿಕ ಶಿಕ್ಷಣವನ್ನು ಆರಂಭಿಸಿದರೆ ಆ ಮಕ್ಕಳು ಸಮಾಜದಲ್ಲಿ ಸಾಮಾನ್ಯ ಮಕ್ಕಳಂತೆ ತಮ್ಮ ಬಾಲ್ಯ ಸವಿಯಬಹುದಾಗಿದೆ.ಈ ತರಬೇತಿಯನ್ನು ಯಶಸ್ವಿಯಾಗಿ ಪಡೆದುಕೊಂಡು ಪಾಲಕರಿಗೆ ಜಾಗೃತಿ ಮೂಡಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಹೇಳಿದರು.ತಮ್ಮ ಪ್ರಾಸ್ತವಿಕ ನುಡಿಯಲ್ಲಿ ಸೇವಾ ಸಂಗಮ ಸಂಸ್ಥೆಯ ಕಾರ್ಯಕ್ರಮದ ವ್ಯವಸ್ಥಾಪಕರಾದ ಶ್ರೀಮತಿ ಶ್ವೇತಾರವರು ಮಾತನಾಡಿ, ಸೇವಾ ಸಂಗಮ ಸಂಸ್ಥೆಯು ಕಳೆದ 17 ವರ್ಷಗಳಿಂದ ಸಮಾಜದ ಅಭಿವೃದ್ದಿಗಾಗಿ ಕಾರ್ಯನಿರ್ವಹಿಸುತ್ತಾ ಬಂದಿದೆ.ಸಮಾಜದಲ್ಲಿ ಕೆಳ ಅಂಚಿನಲ್ಲಿರುವವರಿಗೆ ಕಾರ್ಯನಿರ್ವಹಿಸುತ್ತಾ ಬಂದಿದೆ.ಕಳೆದ 6 ವರ್ಷಗಳಿಂದ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದಡಿಯಲ್ಲಿ ಬೆಳವಣ ಗೆಯಲ್ಲಿ ಕುಂಠಿತವಿರುವ ಮಕ್ಕಳೊಂದಿಗೆ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಿದರು. ಸಕ್ಯಾ ಫೌಂಡೇಶನ ಬೆಂಗಳೂರನಿಂದ ಆಗಮಿಸಿದಂತಹ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಖಾಜಾ ಹುಸೇನ್ ಅವರು ಮಾತನಾಡುತ್ತಾ ಅಂಗನವಾಡಿ ಕಾರ್ಯಕರ್ತರು ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯಡಿಯಲ್ಲಿ ಬರುವ 0–6 ವರ್ಷದ ಮಕ್ಕಳನ್ನು ಅತಿ ಶೀಘ್ರದಲ್ಲಿ ಗುರುತಿಸಿ ಆ ಮಕ್ಕಳಿಗೆ ಚಟುವಟಿಕೆ ನೀಡುವ ಮೂಲಕ ಮಗುವಿನ ನ್ಯೂನತೆ ಕಡಿಮೆ ಮಾಡಿ, ವಿಶೇಷ ಚೇತನರ ಕಾಯಿದೆ 2016 ಕಾಯ್ದೆ ಪ್ರಕಾರ ಇರುವಂತಹ 21 ವಿಕಲಾಂಗತೆಗಳು ಬಗ್ಗೆ ಮಾಹಿತಿ ನೀಡಿದರು. ಮಗು ವಿಕಲಾಂಗತೆಯನ್ನು ಹೊಂದಿಕೊಂಡು ಜನಿಸಲು ಕಾರಣ ಹಾಗೂ ಮಹಿಳೆ ಗರ್ಭವತಿಯಾದಾಗ ತೆಗೆದುಕೋಳ್ಳುವಂತಹ ಮುನ್ನೇಚ್ಚರಿಕೆ ಕ್ರಮಗಳ ಬಗ್ಗೆ ತರಬೇತಿಯನ್ನು ನೀಡಲಾಯಿತು.ಈ ಕಾರ್ಯಕ್ರಮದಲ್ಲಿ ಕಲಬುರಗಿ ನಗರದ ಸೇವಾ ಸಂಗಮ ಸಂಸ್ಥೆಯ ಸಹ ನಿರ್ದೇಶಕರಾದ ಫಾದರ್ ದೀಪಕ್, ಮೇಲ್ವಿಚಾರಕರಾದ ಶ್ರೀಮತಿ.ಜ್ಯೋತಿ ಹಾಗೂ ಶ್ರೀಮತಿ ಬೌರಮ್ಮ ವೇಧಿಕೆಯಲ್ಲಿ ಉಪಸ್ಥಿತರಿದ್ದರು. ಶಿವಕಾಂತ ನಿರೂಪಿಸಿದರು, ಶ್ರೀಮತಿ ಜಗದೇವಿ ಸ್ವಾಗತಿಸಿದರು, ಶ್ರೀಮತಿ ದಾಕ್ಷಾಯೀಣ, ವಂದಿಸಿದರು, ನಗರ ವಲಯದ ಒಟ್ಟು 63 ಜನ ಅಂಗನವಾಡಿ ಕಾರ್ಯಕರ್ತರು ಭಾಗವಹಿಸಿದರು.







## “ಬೆಳವಣಗೆಯಲ್ಲಿ ಕುಂಠಿತಹೊಂದಿರುವ ಮಕ್ಕಳು”



ಜುಲೈ 4 ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಫೌಂಡೆಶನ್ ಸಹಯೋಗದೊಂದಿಗೆ, ಶೀಘ್ರ ಪತ್ತೆ ಹಚ್ಚುವಿಕೆ ಆರಂಭಿಕ ಶಿಕ್ಷಣ ಯೋಜನೆ ಅಡಿಯಲ್ಲಿ, ಕಲಬುರಗಿ ತಾಲ್ಲೂಕಿನ ಪಟ್ಟಣ ಗ್ರಾಮದಲ್ಲಿ ಶ್ರೀ ಮಹಾಲಕ್ಷ್ಮೀ ಜಾತ್ರಾ ಮಹೋತ್ಸವದಲ್ಲಿ ಟೆಂಟ್ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.ಬೆಳವಣ ಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳ 0–6 ವರ್ಷ ಹೊಂದಿರು ಮಕ್ಕಳನ್ನು ಗುರುತಿಸುವ ವಿಧಾನವನ್ನು ತಿಳಿಸಿದರು. ಅಂದರೆ 3 ತಿಂಗಳಿಗೆ ಕತ್ತು ನಿಂತಿರಬೇಕು, ಒಂದು ವೇಳೆ ಕತ್ತು ಕುಳಿತಿರಲಿಲ್ಲ ಅಂದರೆ ಆ ಮಗು ಬೆಳವಣ ಗೆಯಲ್ಲಿ ಕುಂಠಿತ ಹೊಂದಿದೆ ಎಂದು ಸೂಚಿಸಲಾಗುತ್ತದೆ, ಆ ಮಗುವಿಗೆ ಚಟುವಟಿಕೆ ಮಾಡುವುದರ ಮೂಲಕ ಮಗುವಿನಲ್ಲಿ ಬದಲಾವಣೆ ಕಾಣಬಹುದು. ಅದರ ಸದುಪಯೊಗವನ್ನು ಪಡೆದುಕೊಳ್ಳಬೇಕೆಂದು ತಿಳಿಸಲಾಯಿತು.ಈ ಕಾರ್ಯಕ್ರಮದಲ್ಲಿ ನಮ್ಮ ಸಂಸ್ಥೆ ನಿರ್ವಹಿಸುತ್ತಿರುವ ಕಾರ್ಯ ವೈಖರಿಯನ್ನು ಮಕ್ಕಳಿಗೆ ಚಟುವಟಿಕೆ ನೀಡುವುದರ ಕುರಿತು ಮಾಹಿತಿ ನೀಡಲಾಯಿತು.ಈ ಜಾತ್ರಾ ಮಹೋತ್ಸದಲ್ಲಿ ಲಕ್ಷ್ಮಿ ಅವರು 75 ಜನರಿಗೆ ಮಾಹಿತಿ ತಿಳಿಸಲಾಯಿತು.

## “ಶೀಘ್ರ ಪತ್ತೆ ಹಚ್ಚುವಿಕೆ ಆರಂಬಿಕ ಶಿಕ್ಷಣ”



ಕಲಬುರಗಿ ತಾಲ್ಲೂಕಿನ ಸಾವಳಗಿ ಗ್ರಾಮದ ಚೇತನ ಕೇಂದ್ರದಲ್ಲಿ ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಫೌಂಡೇಶನ ಕಲಬುರಗಿ ಸಂಯೋಗದಲ್ಲಿ ಬೆಳವಣ ಗೆಯಲ್ಲಿ ಕುಂಠತವಿರುವ ಮಕ್ಕಳಿಗೆ ಫಿಜಿಯೋಥೆರಪೊ ಶಿಬಿರ ಕಾರ್ಯಕ್ರಮವನ್ನು ಜುಲೈ 9ರಂದು ಹಮ್ಮುಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಸುತ್ತಮೂತ್ತಲಿನ ಗ್ರಾಮಗಳಿಂದ 9 ಮಕ್ಕಳು ಹಾಗೂ ಅವರ ಪೋಷಕರು ಭಾಗವಹಿಸಿದರು.ಬೆಳವಣಗೆಯಲ್ಲಿ ಕುಂಠಿತವಿರುವ ಮಕ್ಕಳಿಗೆ ಉತ್ತೇಜಕ ಚಟುವಟಿಕೆಯ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ತಿಳಿಸಲಾಯಿತು.ಶ್ರೀಯುತ ಸದಾನಂದ ಸ್ವಾಮಿ ಫಿಜಿಯೋಥೆರೆಪಿಸ್ಟ, ಶ್ರೀಮತಿ ಶ್ವೇತಾ ಯೋಜನಾ ವ್ಯವಸ್ಥಾಪಕರು ಅಂಗನವಾಡಿ ಕಾರ್ಯಕರ್ತೆಯಾದ ಸುಧಾ ಉಪಸ್ಥಿತರಿದ್ದರು.ಈ ಕಾರ್ಯಕ್ರಮದಲ್ಲಿ ಮಕ್ಕಳು, ಪಾಲಕರು ಮತ್ತು ಪೋಷಕರು ಭಾಗವಹಿಸಿದರು.

## “ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕುರಿತು ಕಾರ್ಯಕ್ರಮ”



ಜುಲೈ 11 ರಂದು ಸೇವಾಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮ್‌ಜೀ ಫೌಂಡೇಶನ್ ಸಹಕಾರದೊಂದಿಗೆ, ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕುರಿತು ಸೇವಾ ಸಂಗಮ ಸಂಸ್ಥೆಯ ಕಾರ್ಯಕರ್ತೆಯಾದ ಶ್ರೀಮತಿ ದಾಕ್ಷಾಯಿಣಿ ಕಲಬುರಗಿ ಜಿಲ್ಲೆಯಲ್ಲಿ ಪಾಣೆಗಾಂವ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬೆಳವಣಗೆಯಲ್ಲಿ ಕುಂಠಿತವಿರುವ ಮಕ್ಕಳ ಕುರಿತು ಮಾಹಿತಿ ಕಾರ್ಯಕ್ರಮ ಹಮ್ಮಿಕೊಂಡಿದ್ದರು. ವಿದ್ಯಾರ್ಥಿಗಳಿಗೆ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳು ಯಾವ ರೀತಿಯಾಗಿ ಲಕ್ಷಣಗಳು ಹೊಂದಿರುತ್ತಾರೆಂದು ವಿವರಿಸಿದ್ದರು. 0–6ವರ್ಷದ ಮಕ್ಕಳನ್ನು ನಾವುಗಳು ಪತ್ತೆಮಾಡಿ ಪರೀಕ್ಷಿಸುತ್ತಾ ಬಂದಿದೆವೆ, ಮೂರು ತಿಂಗಳಲ್ಲಿ ಮಗುವಿನ ಕುತ್ತಿಗೆ ನಿಂತುಕೋಳ್ಳದೆ ಇರುವುದು, 9 ತಿಂಗಳಲ್ಲಿ ಮಗುವು ಅಂಬ್ಬೆಗಾಲು ಹಾಕದೆ ಇರುವುದು, 1 ವರ್ಷದಲ್ಲಿ ಮಗುವು ಮಾತನಾಡದೆ ಇರುವುದು, 2 ವರ್ಷವಾದರು ಯಾರ ಜೋತೆಗೆ ಮಗುವು ಸೇರದೆ ಇರುವುದು, 6 ವರ್ಷದ ಮಗುವು ಶಾಲೆಗೆ ಹೋಗಬೇಕು, ಈ ಎಲ್ಲಾ ಅಂಶಗಳು ಮಗುವಿನಲ್ಲಿ ಕಂಡುಬಂದರೆ ಬೆಳವಣ ಗೆಯಲ್ಲಿ ಕುಂಠಿತವಿರು ಮಗು ಎಂದು ಗುರುತಿಸಲಾಗುತ್ತದೆ. ಈ ಒಂದು ಕಾರ್ಯಕ್ರಮದಲ್ಲಿ 80 ವಿದ್ಯಾರ್ಥಿಗಳು ಒಬ್ಬ ಸಹ ಶಿಕ್ಷಕರು ಉಪಸ್ಥಿತರಿದ್ದು ಮಾಹಿತಿ ಪಡೆದುಕೊಂಡರು.

## "ಮನೆಗೊಂದು ಮರ ಊರಿಗೊಂದು ಕಾಡು"



ಸೇವಾ ಸಂಗಮ ಸಂಸ್ಥೆ ಮತ್ತು ಅಜೀಂ ಪ್ರೇಮಜೀ ಫೌಂಡೇಶನ್ ಸಹಕಾರದೊಂದಿಗೆ, ಕಲಬುರಗಿ ಜಿಲ್ಲೆಯಲ ನದಿಸಿನ್ನೂರು ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಉರ್ದು ಮಾದ್ಯಾಮ ಶಾಲೆಯಲ್ಲಿ ಜುಲೈ 14ರಂದು ವನಮಹೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.ಕಾರ್ಯಕ್ರಮವನ್ನು ಉದ್ದೇಶಿಸಿ ಸೇವಾಸಂಗಮ ಸಂಸ್ಥೆಯ ಕಾರ್ಯಕತ್ರೆಯಾದ ಶ್ರೀಮತಿ ದಾಕ್ಷಾಯಿಣಿ ಮಾತನಾಡಿದರು.ವನಮೋಹತ್ಸವ ದಿನವನ್ನು ಜುಲೈ 15 ರಂದು ಆಚರಣೆ ಮಾಡುತ್ತಾರೆ, ಇದೊಂದು ಮಳೆಯ ಹಬ್ಬವಾಗಿದೆ, ನಾವೆಲ್ಲರೂ ಸಹ ಈ ದಿನದಂದು ಮನೆಗೋಂದು ಗಿಡ ಊರಿಗೋಂದು ಕಾಡು ನಿರ್ಮಿಸಬೇಕಾಗಿದೆ, ಪರಿಸರ ಸಂರಕ್ಷಣೆ ನಮೆಲ್ಲರ ಹೋಣೆಯಾಗಿದೆ. 'ಹಸಿರೆ ಉಸಿರು', 'ಉಳಿದರೆ ಕಾಡು ಅಳಿಯದು ನಾಡು' ಎಂಬ ಮಾತು ಅಕ್ಷರಶ: ಸತ್ಯ ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ, ಶಾಲೆಯ ಮುಖ್ಯಗುರುಗಳು ಇಬ್ಬರು ಸಹ-ಶಿಕ್ಷಕರು ಉಪಸ್ಥಿತರಿದ್ದು, ಕಾರ್ಯಕ್ರಮದಲ್ಲಿ 32 ವಿದ್ಯಾರ್ಥಿಗಳು ಭಾಗವಹಿಸದ್ದರು.

## "ಪಾಲಕರ ಗುಂಪು ರಚನೆ"



ಜೂನ್ 22 ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮಜೀ ಪೌಂಡೇಶನ್ ಸಂಯುಕ್ತಾಶ್ರಯದಲ್ಲಿ, ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳ ಪಾಲಕರ ಗುಂಪು ರಚನೆ ಕಾರ್ಯಕ್ರಮವನ್ನು, ಕಲಬುರಗಿ ನಗರ ಪ್ರದೇಶದ ಮಿಲತ್ ನಗರದಲ್ಲಿ ಹಮ್ಮಿಕೋಳಲಾಯಿತ್ತು. ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಸೇವಾ ಸಂಗಮ ಸಂಸ್ಥೆಯ ಕಾರ್ಯಕ್ರಮದ ವ್ಯವಸ್ಥಾಪಕಿಯಾದ ಶ್ರೀಮತಿ ಶ್ವೇತಾ ಅವರು "ಒಗ್ಗಟ್ಟಿನಲ್ಲಿ ಬಲವಿದ್ದೆ" ಎಂಬಂತೆ ನಾವು ಪ್ರತಿಯೊಂದ್ದು ಕಡೆ ಪಾಲಕರ ಗುಂಪು ತಯಾರಿಸುತ್ತಿದ್ದು.ಎಲ್ಲಾ ಪಾಲಕರನ್ನು ಒಗ್ಗುಡಿಸುವ ಮೂಲಕ ಗಂಪು ರಚನೆ ಮಾಡಲಾಗುತ್ತಿದ್ದೆ.ಸಣ್ಣ ಸಣ್ಣ ಪಾಲಕರ ಗುಂಪು ತಯಾರಿಸಿ ನಂತರ ಒಂದು ದೊಡ್ಡ ಗುಂಪು ಅಸ್ತಿತ್ವಕ್ಕೆ ತರಲಾಗುತ್ತದೆ.ಈ ಗುಂಪು ರಚಿಸುವುದರಿಂದ ಸರ್ಕಾರಿ ಸೌಲಭ್ಯಗಳು ಪಡೆದುಕೊಳ್ಳಲು ಸುಲಭವಾಗುತ್ತದೆ.ಒಬ್ಬರು ಇಬ್ಬರು ಹೋಗಿ ಸೌಲಭ್ಯಗಳನ್ನು ಕೇಳುವುದರಿಂದ ಪರಿಹಾರ ಸಿಗದು, ನಾವು ಒಟ್ಟಾಗಿ ಹೋಗಿ ಮಾತನಾಡಿದ್ದಾಗ ಸಮಸ್ಯೆಗೆ ಪರಿಹಾರ ಕಂಡುಕೋಳಬಹುದ್ದು ಎಂದು ತಿಳಿಸಲಾಯಿತ್ತು.ಈ ಕಾರ್ಯಕ್ರಮದಲ್ಲಿ ಶ್ರೀಮತಿ ಜಗದೇವಿ ಹಾಗು ಅಂಗನವಾಡಿ ಕಾರ್ಯಕರ್ತೆಯಾದ ಶ್ರೀಮತಿ ಸೈದಾ ಶೆಹಜಾನ್ ಉಪಸ್ಥಿತರಿದ್ದರು.

## "ಶಿಕ್ಷಣ ಯಾರ ವೈಯಕ್ತಿಕ ಸ್ವತಲ್ಲ ಪ್ರತಿಯೊಬ್ಬರ ಹಕ್ಕು"



ಕಲಬುರಗಿ ನಗರ ಪ್ರದೇಶದ ದರಿಯಾಪುರ ಹಾಗೂ ಕರುಣೇಶ್ವರ ನಗರದಲ್ಲಿರುವಂತಹ 2 ಮಕ್ಕಳಿಗೆ 6 ವರ್ಷವಿದ್ದು, ಈ ಮಕ್ಕಳು ಬೆಳವಣಿಗೆಯಲ್ಲಿ ಕುಂಠಿತವಿದ್ದು.ಈ ಮಕ್ಕಳ ಕುಟುಂಬ ಆರ್ಥಿಕವಾಗಿ ಹಿಂದುಳಿದಿದ್ದು, ಈ ಮಕ್ಕಳ ತಾಯಿಂಯದಿರು ಏಕಪೋಷಕರಾಗಿದ್ದು, ಮೊದಲಿಗೆ 2 ಮಕ್ಕಳನ್ನು ಗುರುತಿಸಿ ಪಾಲಕರಿಗೆ ಶೀಘ್ರ ಪತ್ತೆ ಹಚ್ಚುವಿಕೆ ಹಾಗೂ ಆರಂಭಿಕ ಶಿಕ್ಷಣ ಕಾರ್ಯಕ್ರಮದ ಕುರಿತು ಮಾಹಿತಿ ನೀಡಲಾಯಿತು.ನಂತರ ಮಕ್ಕಳ ಮನೆಗೆ ನಾವು ಸತತವಾಗಿ ಭೇಟಿ ನೀಡಿ ಚಟುವಟಿಕೆ ನೀಡುವುದರ ಮೂಲಕ ಒಂದು ಮಗುವಿಗೆ ಮಾತಿನಲ್ಲಿ ದೋಷವಿದ್ದು, ಆ ಮಗುವಿಗೆ ನಿರಂತರವಾಗಿ ಸ್ಪೀಚ್ ಥೇರಪಿ ನೀಡುತಿರುವುದರಿಂದ ಮಗು ಪ್ರಸ್ತುತವಾಗಿ ಮಾತನಾಡುತ್ತಿದೆ. ಹಾಗೆ ಇನ್ನೊಂದು ಮಗು ತುಂಬಾ ಉದ್ವೇಗದ ವರ್ತನೆ ಹೊಂದಿದ್ದು, ಮಗು ಒಂದೇ ಕಡೆ ಕುಳಿತುಕೋಳ್ಳುತ್ತಿರಲಿಲ್ಲಾ ಆ ಮಗುವಿಗೆ ಹಲವು ರೀತಿಯ ಚಟುವಟಿಕೆ ಮಾಡಿಸಿದರಿಂದಾಗಿ ಸಧ್ಯ ಮಗು ಇವಾಗ ಒಂದೇ ಕಡೆ ಕುಳಿತುಕೋಳ್ಳುತ್ತಿದೆ ಹಾಗೂ ಹೇಳಿದ ಮಾತನ್ನು ಅರ್ಥ ಮಾಡಿಕೋಳ್ಳುತಿದೆ. ಈ ಮಕ್ಕಳಲ್ಲಿ ಪ್ರಸ್ತುತವಾಗಿ ತುಂಬಾ ಬದಲಾವಣೆ ಕಂಡು ಬಂದಿದೆ, ಆದ ಕಾರಣ ಈ ಮಕ್ಕಳು ಶಿಕ್ಷಣದಿಂದ ವಂಚಿತರಾಗದೇ ಇವರು ಸಹ ಮುಖ್ಯವಾಹಿನಿಗೆ ಬರಬೇಕು ಎಂಬ ಉದ್ದೇಶದಿಂದ ಎರಡು ಮಕ್ಕಳಿಗೆ ಪ್ರೇರಣಾ ಕಿರಿಯ ಪ್ರಾಥಮಿಕ ಶಾಲೆ ಹೌಸಿಂಗ್ ಬೋರ್ಡ್ ಕಲಬುರಗಿಯಲ್ಲಿ ದಾಖಲಿಸಲಾಯಿತ್ತು. ಮಕ್ಕಳ ಪಾಲಕರು, ಮಕ್ಕಳು ಶಾಲೆಗೆ ದಾಖಲಿಸಿದ್ದು ಕಂಡು ಪಾಲಕರು ಸಂತೋಷವನ್ನು ವ್ಯಕ್ತಪಡಿಸಿದ್ದರು. ಹಾಗೂ ಶಾಲೆಯ ಮುಖ್ಯೋಪಾಧ್ಯಯರು ಸಹ ಇಂತಹ ಸಮಾಜ ಸೇವೆ ಕಾರ್ಯದಲ್ಲಿ ತೊಡಗಿರುವ ಸೇವಾ ಸಂಗಮ ಸಂಸ್ಥೆಗೆ ಹಾಗೂ ನಿರ್ದೇಶಕರಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ತುಂಬಾ ಧನ್ಯವಾದ ಸಲ್ಲಿಸಿದರು.

## “ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳ ಪಾಲಕರ ಗುಂಪುರಚನೆ”



ಜುಲೈ25 ರಂದು ಸೇವಾಸಂಗಮ ಸಂಸ್ಥೆ ಮತ್ತು ಅಜೀಂಪ್ರೇಮ್ಜಿ ಫೌಂಡೇಶನ ಫೈಟ್ ಆಶ್ರಯದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದಡಿಯಲ್ಲಿ ಕಲಬುರಗಿ ನಗರದ ಎಮ್.ಎಸ್,ಕೆ.ಮಿಲ್ ಸರಕಾರಿ ಉರ್ದು ಶಾಲೆಗೆ ಭೇಟಿ ನೀಡಲಾಯಿತು.ಬೆಳವಣ ಗೆಯಲ್ಲಿ ಕುಂಠಿತವಿರುವ ಮಕ್ಕಳ ಪಾಲಕರು ತಮ್ಮ ಮಕ್ಕಳಿಗೆ ಸಿಗಬೇಕಾದ ಶಿಷ್ಯವೇತನ ಶಿಕ್ಷಕರು ಮಕ್ಕಳಿಗೆ ನೀಡುತ್ತಿಲ್ಲಾ ತಮ್ಮ ಸಮಸ್ಯೆಯನ್ನು ತೋಡಿಕೊಂಡರು.ಈ ಕುರಿತು ಪೋಷಕರು, ಶಾಲೆ ಮುಖ್ಯ ಶಿಕ್ಷಕರಿಗೆ ಮನವಿಯನ್ನು ನೀಡಿದರು.ಇದರ ಬಗ್ಗೆ ವಿಚಾರಿಸಲು ಸೇವಾಸಂಗಮ ಸಂಸ್ಥೆ ಕಾರ್ಯಕ್ರಮದ ವ್ಯವಸ್ಥಾಕಿ ಶ್ರೀಮತಿ ಶ್ವೇತಾ ಮತ್ತು ಕಾರ್ಯಕರ್ತರಾದ ಶ್ರೀಮತಿ ಶಿವಕಾಂತರವರು ಪಾಲಕರೊಂದಿಗೆ ಮಕ್ಕಳ ಶಿಷ್ಯವೇತನದ ಕುರಿತು ಚರ್ಚಿಸಿ ಸಮಸ್ಯೆಯನ್ನು ಪರಿಹರಿಸಲು ಪ್ರಯತ್ನಿಸಿದರು.

## “ಕಾಡು ಬೆಳೆಸಿ ನಾಡು ಉಳಿಸಿ”



ಸೇವಾ ಸಂಗಮ ಸಂಸ್ಥೆ ಮತ್ತು ಅಜೀಂ ಪ್ರೇಮಜೀ ಫೌಂಡೇಶನ್ ಇವರ ಸಂಯುಕ್ತಾಕ್ಷರದಲ್ಲಿ. ಕಲಬುರಗಿ ಜಿಲ್ಲೆಯ ಶ್ರೀ ಕಾಮರಾಜ ನಾಡರ್ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜುಲೈ 23 ರಂದು ವನಮಹೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮವನ್ನು ಉದ್ದೇಶಿಸಿ ಸೇವಾಸಂಗಮ ಸಂಸ್ಥೆಯ ಕಾರ್ಯಕ್ರಮದ ವ್ಯವಸ್ಥಾಪಕಿಯಾದ ಶ್ರೀಮತಿ ಶ್ವೇತಾ ಮಾತನಾಡಿದರು.ವನಮೋಹತ್ಸವ ದಿನವನ್ನು ಜುಲೈ 15 ರಂದು ಆಚರಣೆ ಮಾಡುತ್ತಾರೆ, ಇದು ನಮ್ಮಗೆ ಸಂತೋಷದ ವಿಷಯ.ಮಳೆ ಬಂದರೆ ಬೆಳೆ ಸಮೃದ್ದಿಯಾಗಿ ಬೆಳೆಯುವುದು.ಮಳೆ ಬಂದರೆ ರೈತರು ಹಾಗೂ ನಾವೆಲ್ಲರೂ ಹಬ್ಬದ ರೀತಿಯಲ್ಲಿ ಆಚರಣೆ ಮಾಡಬೇಕು.ನಾವೆಲ್ಲರೂ ಮನೆಗೊಂದು ಮಗು ಊರಿಗೊಂದು ವನ ನಿರ್ಮಿಸಬೇಕು ಎಂದು ತಿಳಿಸಲಾಯಿತ್ತು.ಪ್ರತಿಯೊಬ್ಬರಿಗೂ ಗಾಳಿ, ನೀರು, ಆಹಾರ, ಮೂಲಭೂತ ಸೌಕರ್ಯಗಳು ಹೇಗೆ ಮುಖ್ಯವೂ ಹಾಗೆ ನಾಡಿಗೊಂದು ವನ ಅಷ್ಟೇ ಮುಖ್ಯೆ ಎಂದು ತಿಳಿದು, ಪ್ರತಿಯೊಬ್ಬರು ಮನೆಗೊಂದು ಮರ ಎಂಬತೆ ಗಿಡ ಮರಗಳನ್ನು ನಿರ್ಮಿಸಬೇಕು ಎಂದು ಜಾಗೃತಿ ಮೂಡಿಸಿದರು.ಅದೇ ರೀತಿ ನಾವು ನಮ್ಮ ಸುತ್ತ ಮುತ್ತಲ್ಲಿನ ಪರಿಸರವನ್ನು ಸ್ವಚ್ಚತೆಯಿಂದ ಸಂರಕ್ಷಣೆ ಮಾಡುವುದು ನಮೆಲ್ಲರ ಹೋಣೆಯಾಗಿದೆ. ಕಾಡುಬೇಳೆಸಿ ನಾಡು ಉಳಿಸಿ ಎಂಬ ಮಾತು ತುಂಬಾ ಪ್ರಾಮುಖ್ಯೆತೆ ಹೊಂದಿದೆ ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ, ಶಾಲೆಯ ಮುಖ್ಯಗುರುಗಳು ನಾಲ್ಕು ಜನ ಸಹ–ಶಿಕ್ಷಕಿಯರು ವಿದ್ಯಾರ್ಥಿಗಳು ಭಾಗವಹಿಸದ್ದರು.

## “ಆರೋಗ್ಯಕರ ಜೀವನಕ್ಕಾಗಿ ಪೌಷ್ಠಿಕ ಆಹಾರ ಸೇವನೆ”




ಕಲಬುರಗಿ ನಗರದ ಪೊಲೀಸ್ ಕಾಲೋನಿಯಲ್ಲಿ ಜುಲೈ 18 ರಂದು, ಆರೋಗ್ಯಕರ ಜೀವನಕ್ಕಾಗಿ ಪೌಷ್ಠಿಕ ಆಹಾರ ಸೇವನೆಯ ಮಹತ್ವದ ಕುರಿತು ಜಾಗೃತಿ ಕಾರ್ಯಕ್ರಮವನ್ನು ಸೇವಾ ಸಂಗಮ ಸಂಸ್ಥೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಹಮ್ಮೀಕೊಳ್ಳಲಾಯಿತು. ತಾಯಂದಿರನ್ನು ಉದ್ದೇಶಿಸಿ ಶ್ರೀಮತಿ ಶ್ವೇತಾ ಅವರು ಮಾತನಾಡಿ, ನಾವು ಪ್ರತಿದಿನ ಸೇವಿಸುವ ಆಹಾರದಿಂದ ನಮಗೆ ಬೇಕಾಗುವ ಪೌಷ್ಠಿಕಾಂಶ ಸಿಗದೆ ಅನೇಕ ರೋಗಗಳಿಗೆ ಆಹ್ವಾನ ನೀಡುತ್ತಿರುವುದು ದುರಾದೃಷ್ಟಕರವಾದ ಸಂಗತಿಯಾಗಿದೆ, ಆದ್ದರಿಂದ ಪ್ರತಿದಿನ ಸೇವಿಸುವ ಆಹಾರ ಹಣ್ಣು ಹಂಪಲು, ಹಾಲು, ಹಸಿ ತರಕಾರಿಯಿಂದ ಕೂಡಿದ ಆಹಾರವನ್ನು ಸೇವಿಸಬೇಕೆಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ 15 ಜನ ಭಾಗವಹಿಸಿ ಪೌಷ್ಟಿಕ ಆಹಾರದ ಮಹತ್ವದ ಕುರಿತು ಮಾಹಿತಿ ಪಡೆದುಕೊಂಡರು.

## “ಅಭಿವೃದ್ಧಿಗಾಗಿ ನಿರ್ವಹಿಸುತ್ತಿರುವ ಕಾರ್ಯಕ್ರಮ”



ಜುಲೈ 2ರಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು/ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಕಲಬುರಗಿ ಇವರಗೆ ಭೇಟಿ ಮಾಡುವ ಮೂಲಕ, ಸೇವಾಸಂಗಮ ಸಂಸ್ಥೆಯ ಹಾಗೂ ಅಜೀಂ ಪ್ರೇಂಜಿ ಫೌಂಡೇಶನ್ ಕಲಬುರಗಿ ಸಂಯುಕ್ತ ಆಶ್ರಯದಲ್ಲಿ ಶೀಘ್ರಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಮೂಲಕ ಬೆಳವಣಗೆಯಲ್ಲಿ ಕುಂಠಿತವಿರುವ ಮಕ್ಕಳ ಅಭಿವೃದ್ಧಿಗಾಗಿ ನಿರ್ವಹಿಸುತ್ತಿರುವ ಕಾರ್ಯಕ್ರಮದ ಕುರಿತು ಮಾಹಿತಿಯನ್ನು ನೀಡಲಾಯಿತು. ತದನಂತರ ಕಲಿಕಾ ನ್ಯೂನತೆ ಇರುವ ಮಕ್ಕಳಿಗೆ ಕೀಟ್ಗಳನ್ನು ನೀಡುವಂತೆ ಮಾನ್ಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಾದ ಶ್ರೀಯುತ ಸಾಧಿಕ್ ಹುಸೇನ್ ಅವರಿಗೆ ಮನವಿ ಪತ್ರವನ್ನು ನೀಡಲಾಯಿತು. ಈ ಸಂದರ್ಭದಲ್ಲಿ ಯೋಜನ ವ್ಯವಸ್ಥಾಪಕರಾದ ಶ್ರೀಮತಿ ಶ್ವೇತಾ ಹಾಗೂ ಸಂಸ್ಥೆಯ ಕಾರ್ಯಕರ್ತರಾದ ಶ್ರೀಮತಿ ಜಗದೇವಿ, ಅನಿತಾ, ರಾಜಕುಮಾರ, ಮಕ್ಕಳು ಮತ್ತು ಪಾಲಕರು ಉಪಸ್ಥಿತರಿದ್ದರು.

## “ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ”



ಎಪ್ರಿಲ್ 17 ರಂದು ಕಲಬುರಗಿ ತಾಲ್ಲೂಕಿನ ಹಡಗಿಲ ಹಾರುತಿ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಸೇವಾ ಸಂಗಮ ಸಂಸ್ಥೆ ಮತ್ತು ಅಜೀಮ್ ಪ್ರೇಮಜಿ ಫೌಂಡೇಷನ ಸಂಯುಕ್ತ ಸಂಘದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. 0–6 ವರ್ಷದೊಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳಿಗೆ ಮೂರು ತಿಂಗಳಿಗೆ ಕತ್ತು ನಿಲ್ಲದಿದ್ದರೆ, ಮಗುವಿಗೆ ನಡೆಯುದಕ್ಕೆ ಬಾರದಿದ್ದರೆ, ಯಾವುದರಲ್ಲಿ ಕುಂಠಿತ ಹೊಂದಿದೆ ಎಂದು ಕಂಡು ಹಿಡಿದು, ಆ ಮಗುವಿಗೆ ವಿಶ್ಲೇಷಣೆ ಮಾಡಿ, ಮನೆಯಲ್ಲಿಯೇ ಚಟುವಟಿಕೆ ಮಾಡುವುದರ ಜೊತೆಗೆ ಮತ್ತು ಸಾಮಗ್ರಿಗಳನ್ನು ಉಪಯೋಗಿಸಿಕೊಂಡು ಉತ್ತೇಜಕ ತರಬೇತಿ ನೀಡುವುದರ ಮೂಲಕ ಮಗುವಿನಲ್ಲಿ ಬದಲಾವಣೆ ತರಲು ಪ್ರಯತ್ನಿಸಲಾಗುವುದು ಎಂದು ಲಕ್ಷ್ಮಿ ಅವರು ಮಾಹಿತಿ ನೀಡಿದರು.

# "ಸುದ್ದಿ ಪತ್ರಿಕೆಯಲ್ಲಿ ಪ್ರಕಟಿಸಲಾದ ಆರ್ಬಿಟ್ ಸಂಸ್ಥೆ ಮತ್ತು ಸೇವಾ ಸಂಘಮ ಸಂಸ್ಥೆ ಕಾರ್ಯಕ್ರಮಗಳು"

## ಸಮಾಜದಲ್ಲಿ ನಡೆಯುವ ದೌರ್ಜನ್ಯ ವಿರುದ್ಧ ಧ್ವನಿ ಎತ್ತಿ:ವಿಕ್ಟರ್ ವಾಸ್



ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI // KALABURAGI
ಮಂಗಳವಾರ 30 ಜುಲೈ 2024
30 JULY 2024
5
ಬೀದರ್ ಲೋಕಲ್ ಎಕ್ಸ್‌ಪ್ರೆಸ್



ಸಸಿ ವಿತರಣೆ



## ಮಾನಸಿಕ ಅಸ್ವಸ್ಥರಿಗೆ ತರಬೇತಿ

ನೂತನ ಬ್ಯಾಚ್
KAS PSI PDO
POLICE VAO
18-07-2024

ನೂತನ ಬ್ಯಾಚ್
KAS PSI PDO
POLICE VAO
15-07-2024

## ಅಂಗನವಾಡಿ ಕಾರ್ಯಕರ್ತೆಯರಿಗೆ ತರಬೇತಿ



ಭಾರತ ವೈಭವ
BHARAT VAIBHAV DAILY
BV5 NEWS

## ಆರ್ಬಿಟ್ ಸಂಸ್ಥೆಯಲ್ಲಿ ಮಾನಸಿಕ ಅಸ್ವಸ್ಥರಿಗೆ ತರಬೇತಿ ಕಾರ್ಯಾಗಾರ



## ಮಕ್ಕಳ ಸಂರಕ್ಷಣೆಯಲ್ಲಿ ಮಹಿಳೆಯರೇ ಮೇಲುಗೈ: ಕಣ್ಣೂರ್



## ಮಕ್ಕಳ ಸಂರಕ್ಷಣೆಯಲ್ಲಿ ಮಹಿಳೆಯರೇ ಮೇಲುಗೈ: ಕಣ್ಣೂರ್





# ORBIT NGO

Non-Governmental Organization
Humnabad, Karnataka

Organization of Bidar Integral Transformation

## Scan this QR Code

## TO DONATE

www.orbitbidar.in

# SEVA SANGAMA

Organization for Social Concern Development

## Scan this QR Code

## TO DONATE

www.sevasangama.in

# ಸೇವಾ ಸಂಗಮ ಮತ್ತು ಆರ್ಬಿಟ್ ಸಂಸ್ಥೆ (NGO)
# ಗುಲ್ಬರ್ಗಾ ಧರ್ಮಕ್ಷೇತ್ರ

## Appeal

ಗುಲ್ಬರ್ಗಾ ಧರ್ಮ ಕ್ಷೇತ್ರವು ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳಾದ ಬೀದರ್, ಬಿಜಾಪುರ್, ಯಾದಗಿರಿ ಹಾಗೂ ಗುಲ್ಬರ್ಗಾ ಜಿಲ್ಲೆಗಳನ್ನು ಒಳಗೊಂಡಿದೆ. ಗುಲ್ಬರ್ಗಾ ಧರ್ಮಕ್ಷೇತ್ರವು ಉಗಮ ಆಗುವುದಕ್ಕಿಂತ ಮುಂಚೆ ಮಂಗಳೂರು ಧರ್ಮಕ್ಷೇತ್ರದಿಂದ ಗುರುಗಳು ಹಾಗೂ ಕನ್ಯಾ ಭಗಿನಿಯರು ಬೀದರ್ ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸಿದ್ದಾರೆ. ಆರ್ಬಿಟ್ ಸಮಾಜ ಸೇವಾ ಸಂಸ್ಥೆಯ ಮುಖಾಂತರ 1993 ರಿಂದ ಆರೋಗ್ಯ, ಶಿಕ್ಷಣ, ಮಹಿಳಾ ಸಬಲೀಕರಣ, ಅಂಗವಿಕಲರ ಸಬಲೀಕರಣ ಹಾಗೂ ನಿರ್ಗತಿಕರಿಗೆ ಆಸರೆ ಒದಗಿಸುವ ಕೆಲಸವನ್ನು ಮಾಡಿದ್ದಾರೆ. ಹಾಗೆ 2005ನೇ ಇಸವಿಯಲ್ಲಿ ಗುಲ್ಬರ್ಗಾ ಧರ್ಮಕ್ಷೇತ್ರ ಉಗಮವಾದಾಗಿನಿಂದ ಈ ಸಮಾಜ ಸೇವಾ ಕೆಲಸವನ್ನು ನಾಲ್ಕು ಜಿಲ್ಲೆಗಳಲ್ಲಿ ಕೈಗೊಳ್ಳಲಾಯಿತು. ಸೇವಾ ಸಂಗಮ ಹಾಗೂ ಆರ್ಬಿಟ್ ಸಂಸ್ಥೆಗಳ ಮುಖಾಂತರ ಮಹಿಳಾ ಸಬಲೀಕರಣ, ಮಕ್ಕಳ ಶಿಕ್ಷಣ, ಅಂಗವಿಕಲರ ಕಾರ್ಯಕ್ರಮ, ಪರಿಸರ ಸಂರಕ್ಷಣೆ, ನಿರುದ್ಯೋಗಿಗಳಿಗೆ ಕೌಶಲ್ಯ ತರಬೇತಿ, ಮಾನಸಿಕ ಅಸ್ವಸ್ಥರಿಗೆ ಪುನರ್ವಸತಿ, ಎಂಟು ವರ್ಷಕ್ಕಿಂತ ಕೆಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿದ ಮಕ್ಕಳಿಗೆ ಚಿಕಿತ್ಸೆ, ನೈಸರ್ಗಿಕ ವಿಪತ್ತು ನಿವಾರಣೆ, ಕ್ಯಾನ್ಸರ್ ಜಾಗೃತಿ ಆಂದೋಲನ, ಹೀಗೆ ಸಮಾಜದಿಂದ ಹಂಚಿಕೆ ತಳ್ಳಲ್ಪಟ್ಟ ಜನರಿಗೆ ಪುನರ್ವಸತಿ ನೀಡುವ ಕೆಲಸವನ್ನು, ಈ ಎರಡು ಸಂಸ್ಥೆಗಳು ಮಾಡುತ್ತಿವೆ. ಹಲವಾರು ಕಾರ್ಯಕ್ರಮಗಳ ಮುಖಾಂತರ ನಮ್ಮ ಎರಡು ಸಂಸ್ಥೆಗಳು ಬಡವರಿಗೆ, ನಿರ್ಗತಿಕರಿಗೆ, ಶೋಷಿತರಿಗೆ, ಹಾಗೂ ವಿವಿಧ ಶೋಷಣೆಗಳಿಗೆ ಒಳಗಾದ ಜನರಿಗೆ ಸ್ಫೂರ್ತಿ, ಶಕ್ತಿ, ಹಾಗೂ ಜೀವವನ್ನು ತುಂಬುತ್ತವೆ. ಈ ಸೇವೆಗಳನ್ನು ಹೆಚ್ಚು ಜನರಿಗೆ ತಲುಪಿಸಲು, ನಿಮ್ಮ ಸಹಾಯ ಹಸ್ತವನ್ನು ಹಾಗೂ ನಮ್ಮೊಂದಿಗೆ ಸೇರಿ ಸುಂದರ ಸಮಾಜವನ್ನು ಕಟ್ಟಲು ನಿಮ್ಮ ನೆರವನ್ನು ಅಪೇಕ್ಷಿಸುತ್ತೇವೆ.

ಬನ್ನಿ ಉತ್ತಮ ಸಮಾಜವನ್ನು ಕಟ್ಟೋಣ.



**TO DONATE, SCAN THE QR CODE**

ನಿಮ್ಮ ಸಹಾಯದಿಂದ ಗುಲ್ಬರ್ಗಾ ಹಾಗೂ ಬೀದರ, ಕೋಳಗೇರಿ ನಿವಾಸ ಮಕ್ಕಳು ಉತ್ತಮ ಶಿಕ್ಷಣ ಪಡೆಯುತ್ತಾರೆ.

ನಿಮ್ಮ ಸಹಾಯದಿಂದ ವಿಶೇಷ ಚೇತನ ಮಕ್ಕಳು ತಮ್ಮ ಸಾಮರ್ಥ್ಯ ಹಾಗೂ ಕೌಶಲ್ಯಗಳು ಕಂಡುಕೊಳ್ಳುತ್ತಾರೆ.

ಪ್ರಾಯೋಜಕರು ಒಂದು ಟ್ಯೂಷನ್ ಸೇಂಟರ್ ಪ್ರತಿ ತಿಂಗಳು 4000/- ವರ್ಷಕ್ಕೆ 40,000/-

ಪ್ರಾಯೋಜಕರು ಒಂದು ಮಗು ರೂ.500 ಪ್ರತಿ ತಿಂಗಳು / ವರ್ಷಕ್ಕೆ 6000/-

ನೀವು ಧನ ಸಹಾಯ ಮಾಡಿದ ಮೇಲೆ ನಿಮ್ಮ ವಿಳಾಸ ಮತ್ತು PAN number ಕೆಳಗಿರುವ ಸಂಖ್ಯೆಗೆ WhatsApp ಮಾಡುವುದು.

**(Only for Indian Citizens)**

**Bank Account Details**

| | |
|---|---|
| Name | : Sevasangama Development Society |
| Account No | : 16040100022902 |
| IFSC Code | : FDRL0001604 |
| Bank | : Federal Bank |
| Branch | : Super Market Kalaburagi |

Fr. Victor Anil Vas
Director, Seva Sangama & ORBIT

Address

Seva Sangama Development Society, Near Kendriya Vidyalaya, Kotnoor D, Kalaburagi, Karnataka-585102

Contact: 8660968063 / 9743112739 - Email: sevasangama2006@gmail.com / Website: www.sevasangama.in